## 30

# ಗೋಡೆಗಳನ್ನು ಕೆಡವಿ ಹಾಕುವದು!

## (10:1-11:18)

ಎರಡನೇ ಪ್ರಪಂಚ ಮಹಾಯುದ್ಧದ ನಂತರ ಬರ್ಲಿನ್ ದೇಶವು, ಪೂರ್ವ ಬರ್ಲಿನ್ ಹಾಗೂ ಪಶ್ಚಿಮ ಬರ್ಲಿನ್ ಎಂದು ಇಬ್ಭಾಗವಾಯಿತು. 1961ನೇ ಇಸವಿಯಲ್ಲಿ ಪೂರ್ವ ಬರ್ಲಿನಿನ ಜನರು ಹೊರಹೋಗದಂತೆ, ಕಮ್ಯೂನಿಸ್ಟರು ಒಂದು ಮಹಾಗೋಡೆಯನ್ನು ನಿರ್ಮಿಸಿದರು. ಅನೇಕ ವರ್ಷಗಳ ಕಾಲ, ಜನರು ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು: 170ಕ್ಕಿಂತ ಅಧಿಕ ಜನರು ಮರಣಹೊಂದಿದರು. ನಾನು ಸಾಯುವವರೆಗೆ, ಆ ಗೋಡೆಯು ಅದೇ ರೀತಿ ಯಾಗಿ ಇರುತ್ತದೆ ಎಂದು ತಿಳಿದಿದ್ದೆನು, ಆದರೆ ನವಂಬರ್ 1989ರಲ್ಲಿ ಆ ಮಹಾಗೋಡೆಯು ಬಿದ್ದು ಹೋಯಿತು ಎಂಬ ಸುದ್ಧಿಯು ನನಗೆ ಆಶ್ಚರ್ಯವುಂಟು ಮಾಡಿತು, ಆ ಗೋಡೆಯ ತುಣುಕುಗಳನ್ನು ಜನರು ಕತ್ತರಿಸಿ, ಕೊಂಡು ಹೋಗುವದನ್ನು ದೂರದರ್ಶನದಲ್ಲಿ ನೋಡಿದೆನು ಅದು ನನ್ನ ನೆನಪಿನ ಸಂತಸದ ಕ್ಷಣವಾಗಿತ್ತು.

ಇತಿಹಾಸದ ಆ ಘಟನೆಯನ್ನು ನೋಡುವಾಗ, ಹೊಸ ಒಡಂಬಡಿಕೆಯು ಅತಿ ವಿಶೇಷ ವಾದ ದಿವಸದ ಬಗ್ಗೆ ತಿಳಿಸುತ್ತದೆ: ಒಂದು ದಿನ, ಯೆಹೂದ್ಯರ ಮತ್ತು ಅನ್ಯರ ನಡುವೆ ಇದ್ದ ಗೋಡೆಯು ಕೆಡವಲ್ಪಟ್ಟಿತು. ಪೌಲನು ಆ ವಿಚಾರವನ್ನು ಈ ಕೆಳಗಿನ ಪದಗಳಲ್ಲಿ ಬರೆದಿರುವನು:

> ನೀವು ಜನ್ಮದಿಂದ ಅನ್ಯಜನರಾಗಿದ್ದೀರಿ; ಶರೀರದಲ್ಲಿ ಕೈಯಿಂದ ಸುನ್ನತಿಮಾಡಿಸಿಕೊಂಡು ಸುನ್ನತಿಯವರೆನಿಸಿಕೊಳ್ಳುವವರು ನಿಮ್ಮನ್ನು ಸುನ್ನತಿಯಿಲ್ಲದವರೆಂದು ಹೇಳುತ್ತಾರೆ. ನೀವು ಪೂರ್ವಕಾಲದಲ್ಲಿ ಕ್ರಿಸ್ತನನ್ನು ಸೇರದವರಾಗಿದ್ದ ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದಿರೆಂದು ಜ್ಞಾಪಕಮಾಡಿ ಕೊಳ್ಳಿರಿ. ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ. ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದು ಹಾಕಿ ಇದ್ದ ದ್ವೇಷವನ್ನು ಮುಗಿಸಿ *ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿ ಹಾಕಿದನು.* ಆತನು ಸಮಧಾನಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ;[1] ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ. ಇದಲ್ಲದೆ ಆತನು ಬಂದು ದೂರವಾಗಿದ್ದ ನಿಮಗೂ ಸಮಾಧಾನವನ್ನು ಮತ್ತು ಸಮೀಪವಾಗಿದ್ದವರಿಗೂ ಸಮಾಧಾನವನ್ನು ಸಾರಿದನು. ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು. ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ

ದೇವರ ಮನೆಯವರೂ ಆಗಿದ್ದೀರಿ (ಎಫೆಸ 2:11-19; ಒತ್ತಿ ಹೇಳಿದ್ದು ನನ್ನದು).

ಯೆಹೂದ್ಯರಿಗೂ ಮತ್ತು ಅನ್ಯರಿಗೂ ನಡುವೆ ಹಳೇ ಒಡಂಬಡಿಕೆಯ ಆಜ್ಞೆಗಳು ಮತ್ತು ಸಂಸ್ಕಾರಗಳು "ವಿಭಜನೆ ಮಾಡುವ ಗೋಡೆಯಾಗಿತ್ತು" - ಅದು ಹಳೆ ಒಡಂಬಡಿಕೆಯ ನಿಯಮವೇ. ಮಸ್ಸೀಯನನ್ನು ಈ ಲೋಕಕ್ಕೆ ಕಳುಹಿಸಿಕೊಡುವ ಸಲುವಾಗಿ, ಮತ್ತು ಯೆಹೂದ್ಯರೊಂದಿಗೆ ವಿಶೇಷವಾದ ಒಡಂಬಡಿಕೆಯನ್ನು ಮಾಡಿಕೊಳ್ಳುವ ಸಲುವಾಗಿಯೂ ದೇವರು ಮೋಶೆಯ ಮೂಲಕ ಧರ್ಮಶಾಸ್ತ್ರವನ್ನು ನೀಡಿದನು (ಗಲಾತ್ಯ 3:16, 19, 24, 25). ಅನ್ಯರು ಆ ಒಡಂಬಡಿಕೆಗೆ ಒಳಪಟ್ಟಿರಲಿಲ್ಲ,[2] ಧರ್ಮಶಾಸ್ತ್ರದ ನಿಮಿತ್ತ ಯೆಹೂದ್ಯರು ಮತ್ತು ಅನ್ಯರ ನಡುವೆ ಅಡ್ಡಗೋಡೆಯು ಉಂಟಾಯಿತು. ಈ ಅಡ್ಡಗೋಡೆಯನ್ನು ತೆಗೆದು ಹಾಕುವದಕ್ಕಾಗಿ ಯೇಸು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸಿದನು. "ಆತನು *ಎಲ್ಲರಿಗೋಸ್ಕರ* ಮರಣವನ್ನು ಅನುಭವಿಸಲೇ ಬೇಕಾಗಿತ್ತು" - ಇದರಲ್ಲಿ ಯೆಹೂದ್ಯರು ಮತ್ತು ಅನ್ಯರು ಒಳಗೊಂಡಿರುವರು (ಇಬ್ರಿಯ 2:9; ಒತ್ತಿ ಹೇಳಿದ್ದು ನನ್ನದು). ಯೇಸು ಮರಣಿಸಿದಾಗ, "ಇಬ್ಬಾಗ ಮಾಡಿದ" ಆ ಗೋಡೆಯು, "ನಾಶವಾಯಿತು"!

ಕಲ್ವಾರಿಯಲ್ಲಿ ಶಾಸ್ತ್ರದ ಪ್ರಕಾರವಾಗಿ, ಯೆಹೂದ್ಯರ ಮತ್ತು ಅನ್ಯರ ನಡುವಿನ ಗೋಡೆಯು ಶಾಸ್ತ್ರೋಕ್ತವಾಗಿ ನಿರ್ನಾಮವಾದರೂ, ಕ್ರೈಸ್ತರಲ್ಲಿ ಅದು ಕಾರ್ಯರೂಪಕ್ಕೆ ಬಂತು. ಇನ್ನೊಂದು ವಿಧದಲ್ಲಿ ಹೇಳುವದಾದರೆ, ಲೂಕ 23ರಂತೆ, ದೇವರ ಮಸ್ಸಿನಲ್ಲಿದ್ದ ಗೋಡೆಯು ಕೆಡವಿ ಹಾಕಲ್ಪಟ್ಟಿತು.[3] ಆದರೆ, ಅಪೋಸ್ತಲರಕೃತ್ಯಗಳು 10ರವರೆ ಮನುಷ್ಯರ ಮನಸ್ಸಿನಲ್ಲಿದ್ದ ಗೋಡೆಯು ನಾಶವಾಗಿರಲಿಲ್ಲ.

ಏಕೆಂದರೆ, ಯೆಹೂದ್ಯರು ತಮ್ಮ ಸ್ವಾಭಿಮಾನಕ್ಕೆ "ವಿಭಜನೆ ಮಾಡುವ ಗೋಡೆಯನ್ನು" ಸೇರಿಸಿಕೊಂಡಿದ್ದರು. ಧರ್ಮಶಾಸ್ತ್ರದ ಪ್ರಕಾರ ಅವರು ಆರಿಸಲ್ಪಟ್ಟ ಜನರಾಗಿದ್ದರು, ಅದರಿಂದ ಅವರು ಅನ್ಯರಿಗಿಂತ ಉತ್ತಮರೆಂದು ಭಾವಿಸಿದ್ದರು. ಧರ್ಮಶಾಸ್ತ್ರವು ಅವರನ್ನು ಪ್ರತ್ಯೇಕವಾಗಿ ಟ್ಟಿತ್ತು ಮತ್ತು ಇದರ ನಿಮಿತ್ತ ಅವರು ಇತರರನ್ನು ಕೆಳಮಟ್ಟದವರು ಎಂದು ಪರಿಗಣಿಸಿದ್ದರು.[4] ಅನೇಕ ವಿಷಯಗಳಲ್ಲಿ ಮನುಷ್ಯನೇ ನಿರ್ಮಿಸಿಕೊಂಡಿರುವ ಅಡ್ಡಗೋಡೆಗಳಾದ, ಅಹಂಭಾವ, ಗೌರವ, ಮತ್ತ ಸ್ವಾರ್ಥಗಳು, ದೇವರ ನಿಯಮಗಳಿಗಿಂತಲೂ ಭಯಂಕರವಾಗಿದ್ದವು! ಅಪೊಸ್ತಲರಕೃತ್ಯಗಳು 10ರಲ್ಲಿ, ಆದಿ ಸಭೆಯಲ್ಲಿ ದೇವರು ಅವುಗಳನ್ನು ಹೇಗೆ ನಿರ್ನಾಮ ಮಾಡಿದನೆಂಬ ಕ್ರಮವನ್ನು ನೋಡುತ್ತೇವೆ.

ಲೂಕನು ಕಥೆಗಳನ್ನು ಪುನರಾವರ್ತನೆ ಮಾಡುವಾಗ, ಕೆಲವು ಅಂಶಗಳನ್ನು ಮೊದಲಿಗೆ ತಿಳಿಸುತ್ತಿರಲಿಲ್ಲ, ಅದನ್ನು ಎರಡನೆಯ ಸಾರಿ ಹೇಳುವಾಗ ತಿಳಿಸುತ್ತಿದ್ದನು. ಆದುದರಿಂದ, ಅಪೊಸ್ತಲರಕೃತ್ಯ 10ರ ಅಧ್ಯಯನದಲ್ಲಿ, ಅಪೊಸ್ತಲರ ಕೃತ್ಯಗಳು 11ರ ವಿವರಣೆಯನ್ನು ನೀಡುತ್ತೇನೆ. ಈ ಅಧ್ಯಾಯಗಳನ್ನು ಧ್ಯಾನಿಸುವಾಗ, ಜನರ ನಡುವೆ ಇರುವ ಅಭ್ಯಾಂತರಗಳು ಈ ದಿನಗಳಲ್ಲಿ ಹೇಗೆ ಹೊಡೆಯಲ್ಪಡುತ್ತವೆ ಎಂದು ತಿಳಿಯೋಣ.

## ದೇವರ ಮೊದಲನೆಯ ಹೆಜ್ಜೆ ಅನ್ಯರನ್ನು ಸಿದ್ಧಪಡಿಸಿರಿ (10:1-8, 22, 30-32; 11:13, 14)

ಇಬ್ಬರು ವ್ಯಕ್ತಿಗಳನ್ನು ಒಂದುಗೂಡಿಸುವ ಮೊದಲು, ಅವರಿಬ್ಬರೊಂದಿಗೆ ವೈಯಕ್ತಿಕ ವಾಗಿ ಮಾತನಾಡಿರಿ - ಸಾಧಾರಣವಾಗಿ ಬೇಗನೇ ಒಂದಾಗಬಹುದಾದ ವ್ಯಕ್ತಿಯೊಂದಿಗೆ, ಮೊದಲು ಮಾತನಾಡಿರಿ. ಆದುದರಿಂದ ಮೊದಲನೆಯದಾಗಿ ದೇವರು ಅನ್ಯರೊಂದಿಗೆ ಮಾತನಾಡಿದನು.

ಕೈಸರೈಯದ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು (10:1) ಎಂದು ನಾವು ಓದುತ್ತೇವೆ.

ಯೆಹೂದ್ಯರ ದೃಷ್ಟಿಯಲ್ಲಿ, ಪಾಲಿಸ್ತೇನಿನ ಯೆರುಸಲೇಮು ಮುಖ್ಯ ಪಟ್ಟಣವಾಗಿದ್ದರೂ, ರೋಮಾಯಲಿಗೆ ಕೈಸರೆಯು ಪ್ರಮುಖ ಪಟ್ಟಣವಾಗಿತ್ತು. ಪಾಲಿಸ್ತೇನ್[5] ರೋಮಾಯದ ರಾಜ್ಯಪಾಲರ ಆಡಳಿತಕ್ಕೆ ಒಳಪಟ್ಟು, ರೋಮಾಯರ ಮುಖ್ಯ ಕಾರ್ಯಗಾರವಾಗಿತ್ತು. ಅದು ಹೆರೋದನಿಂದ ಸಂಸ್ಥಾಪನೆಗೊಂಡು, ಕೈಸರೆಯ ಅಗಸ್ತನ ಹೆಸರನ್ನು ಪಡೆದಿತ್ತು. ಅದು ಒಂದು ಸುಂದರ ಪಟ್ಟಣವಾಗಿತ್ತು. ಅದರಲ್ಲಿ ಸುಂದರವಾದ ಬೀದಿಗಳು ಮತ್ತು ಶಿಲೆಯಿಂದ ಕೆತ್ತಲ್ಪಟ್ಟ ಕಟ್ಟಡಗಳು ಇದ್ದವು. ಆದರೆ ದೇವರು ಆ ಶಿಲೆಗಳಲ್ಲಿ ಆಸಕ್ತಿಯನ್ನು ಹೊಂದಿರದೆ; ಆತನು ಒಬ್ಬ ಮನುಷ್ಯನಲ್ಲಿ ಆಸಕ್ತಿವಹಿಸಿದ್ದನು. ಆ ಮನುಷ್ಯನೇ ಕೊರ್ನೇಲ್ಯನು.

ಮೊದಲನೆಯದಾಗಿ, ಕೊರ್ನೇಲ್ಯನು ಅನ್ಯರಿಂದ ಪರಿವರ್ತನೆ ಗೊಂಡವರಲ್ಲಿ ಮೊದಲಿಗನಾಗಿದ್ದಾನೆ. ಅವನು ಸೈನಿಕನಾಗಿದ್ದು, ಮತ್ತು ಸೈನಿಕರು ಯಾವದೇ ವಿಧದಲ್ಲಿ ಆತ್ಮೀಕ ಜೀವಿತವನ್ನು ಹೊಂದಿದವರು ಎಂಬ ಹೇಳಿಕೆಯಿರುವದಿಲ್ಲ. ಕೊರ್ನೇಲ್ಯನು ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾಗಿದ್ದನು. ಒಂದು "ಪಟಾಲಮ" ಅಂದರೆ 600-1000 ಮನುಷ್ಯರನ್ನು ಹೊಂದಿದ ಒಂದು ಸೈನ್ಯದ ತುಕಡಿ.[6] ಇತಾಲ್ಯದ "ಪಟಾಲಮ" ಅಂದರೆ ಅದು ಇತಾಲ್ಯದಲ್ಲಿದ್ದ ಒಂದು ತುಕಡಿ ಮತ್ತು ಮೂಲತ ಅದರಲ್ಲಿ ಇತಾಲ್ಯದ ಜನರು ಮಾತ್ರ ಇದ್ದರು,[7] "ಕೊರ್ನೇಲ್ಯಸ್" ಎಂಬುದು ಲ್ಯಾಟಿನ ಹೆಸರಾಗಿದ್ದು[8] ಅವನು ಸಹ ಮೂಲತಃ ಇತಾಲ್ಯದವನೇ. ಅವನು ನೂರು ಜನ ಸೈನಿಕರಿಗೆ ನಾಯಕನಾಗಿದ್ದ[9] ಶತಾಧಿಪತಿಯಾಗಿದ್ದನು.

ಕೊರ್ನೇಲ್ಯನು ರೋಮಾಯರ ಸಿಪಾಯಿಯಾಗಿದ್ದರೂ ಅವನು ಒಳ್ಳೆಯ ಮನುಷ್ಯನಾಗಿದ್ದನು. ಕೆಲವು ಸಾರಿ ಒಳ್ಳೆಯ ಮನುಷ್ಯರು ಕೆಟ್ಟ ಸ್ಥಳದಲ್ಲಿರುವದನ್ನು ನೋಡುತ್ತೇವೆ. ಆದರೆ ಇವನು ಮಾತ್ರ ಅತಿ ಉತ್ತಮನಾದ ಮನುಷ್ಯನಾಗಿದ್ದನು. 10:2ರಲ್ಲಿ ನಾವು ಈ ರೀತಿಯಾಗಿ ಓದುತ್ತೇವೆ ಅವನು "ಭಕ್ತನಾಗಿದ್ದು, ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನು ಆಗಿದ್ದು ಜನರಿಗೆ ಬಹಳವಾಗಿ ದಾನಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು." ಎಂಬುದಾಗಿ ನಂತರ, ಅವನ ಸೇವಕರು ಅವನನ್ನು ಕುರಿತು, "ಅವನು ನೀತಿವಂತನು ದೇವರಿಗೆ ಭಯಪಡುವವನು ಯೆಹೂದ್ಯ ಜನರೆಲ್ಲರಿಂದ ಒಳ್ಳೆಯ ಹೆಸರು ಹೊಂದಿದವನು ಆಗಿದ್ದಾನೆ" ಅಂದರು (10:22). ಈ ರೋಮಾಯದ ಅಧಿಕಾರಿಯು ಅನ್ಯಧರ್ಮಿಯರ ಶೂನ್ಯತನದ ಬಗ್ಗೆ ಬೇಸರಗೊಂಡು ಸತ್ಯದೇವರ ಮೇಲೆ ನಂಬಿಕೆಯಿಟ್ಟಿದ್ದನು. ಅವನು - "ದೇವರಿಗೆ ಭಯಪಡುವವನಾಗಿದ್ದು"[10] - ಯೆಹೋವನನ್ನು ನಂಬಿದ ಅನ್ಯನಾಗಿದ್ದನು, ಅವನು ಧರ್ಮಶಾಸ್ತ್ರದ ನ್ಯಾಯನೀತಿಗಳನ್ನು ಅಪ್ಪಿಕೊಂಡಿದ್ದನು,[11] ಆದರೆ ಸುನ್ನತಿ ಹೊಂದದೇಯಿದದ್ದರಿಂದ ಯೆಹೂದ್ಯರ ಗುಂಪಿಗೆ ಸೇರಿದವನಾಗಿರಲಿಲ್ಲ.

ಒಂದು ಮಧ್ಯಾಹ್ನದ ಮೇಲೆ 3 ಘಂಟೆಯ ಸಮಯದಲ್ಲಿ ಪ್ರಾರ್ಥಿಸುತ್ತಿದ್ದನು[12] ಆ ಸಮಯವು ಯೆಹೂದ್ಯರ ಒಂದು "ಪ್ರಾರ್ಥನಾ"[13] ಸಮಯವಾಗಿತ್ತು. ತಟ್ಟನೆ, "ಹೊಳೆ ಯುವ ವಸ್ತ್ರವನ್ನು ಧರಿಸಿಕೊಂಡಿದ್ದ ಒಬ್ಬ ಮನುಷ್ಯನು ಅವನೆದುರಿಗೆ ನಿಂತುಕೊಂಡನು" (10:30)!

> ಮಧ್ಯಾಹ್ನದ ಮೇಲೆ ಸುಮಾರು ಮೂರು ಘಂಟೆಗೆ[14] ಅವನಿಗೆ ಒಂದು ದರ್ಶನ ಉಂಟಾಗಿ[15] ಒಬ್ಬ ದೇವದೂತನು ತನ್ನ ಬಳಿಗೆ ಬಂದು - ಕೊರ್ನೇಲ್ಯನೇ ಎಂದು ಕರೆ ಯುವದನ್ನು ಅವನು ಪ್ರತ್ಯಕ್ಷವಾಗಿ ಕಂಡನು.[16] ಅವನು ಆ ದೂತನನ್ನು ದೃಷ್ಟಿಸಿನೋಡಿ ಭಯಹಿಡಿದವನಾಗಿ[17] ಏನು ಸ್ವಾಮೀ ಎಂದು ಕೇಳಲು ದೂತನು ಅವನಿಗೆ - ನಿನ್ನ ಪ್ರಾರ್ಥನೆಗಳೂ ನಿನ್ನ ದಾನ ಧರ್ಮಗಳೂ ದೇವರ ಮುಂದೆ ಜ್ಞಾಪಕಾರ್ಥವಾಗಿ ಏರಿ ಬಂದವು (10:3, 4).

ಯಜ್ಞವೇದಿಯ ಹೊಗೆ ಮೇಲೇರುವಂತೆ, ಕೊರ್ನೇಲ್ಯನ ಪ್ರಾರ್ಥನೆ ದಾನ ಧರ್ಮಗಳು ದೇವರ ಸನ್ನಿಧಿಗೆ ಏರಿ ಹೋದವು.[18] ನಂತರ ದೇವದೂತನು, ಕೊರ್ನೇಲ್ಯನಿಗೆ, "ನಿನ್ನ ಪ್ರಾರ್ಥನೆಯು ಕೇಳಬಂತು, ನಿನ್ನ ದಾನ ಧರ್ಮಗಳು ದೇವರ ಸನ್ನಿಧಾನದಲ್ಲಿ ನೆನಪಿಗೆ ಬಂದವು" ಎಂದು ಹೇಳಿದನು (ವಚನ 31).

ಕೆಲವು ಸಾರಿ, ದೇವರು ಕ್ರೈಸ್ತರಲ್ಲದವರ ಪ್ರಾರ್ಥನೆಯನ್ನು ಕೇಳುವನೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಯೋಹಾನ 9:31ರಲ್ಲಿರುವ "ಭಕ್ತಿ ಹೀನರ ಪ್ರಾರ್ಥನೆಯನ್ನು ದೇವರು ಕೇಳುವದಿಲ್ಲ"[19] ಎಂಬ ವಾಕ್ಯವನ್ನು ಸಹ ಗಮನಿಸುತ್ತೇವೆ - ಅದಕ್ಕೆ ಸರಳವಾದ ಉತ್ತರ "ಇಲ್ಲ" ಎಂಬುದೇ. ದೇವರು ಕೊರ್ನೇಲ್ಯನ ಪ್ರಾರ್ಥನೆಯನ್ನು ಕೇಳಿದ ಮಾದರಿಯಂತೆ, "ಅದು ಅವನ ಜೀವಿತದ ವರ್ತನೆ ಮತ್ತು ಪ್ರಾರ್ಥನೆಯ ಉದ್ದೇಶವನ್ನು ಮಾತ್ರ ಅವಲಂಭಿಸಿರುತ್ತದೆ." ಒಂದು ವೇಳೆ ಆ ವ್ಯಕ್ತಿಯು ಕೊರ್ನೇಲ್ಯನಂತೆ, ದೇವರನ್ನು ಹುಡುಕಿ, ದೇವರ ಸಾನಿಧ್ಯವನ್ನು ಬಯಸುವವರ ಪ್ರಾರ್ಥನೆಯಲ್ಲಿ ಅಡ್ಡಿ ಇಲ್ಲದೆ ಹೋದರೆ ಆ ರೀತಿಯ ಪ್ರಾರ್ಥನೆಯು ಸಹಾಯಕವಾಗುತ್ತದೆ.[20] ಮನುಷ್ಯನ ಚೈತನ್ಯವು ದೇವ ವಾಕ್ಯದಿಂದಲೇ ಉಂಟಾಗುವದು ಎಂಬ ಅರಿವನ್ನು ಹೊಂದುವಾಗ (11:14) ಈ ಕಾರ್ಯ ಉಂಟಾಗುತ್ತದೆ. ಒಂದು ವೇಳೆ ಒಬ್ಬನು ಸುವಾರ್ತೆಗೆ ಒಳಗಾಗದಿದ್ದರೆ, ದೇವರು ಅವನ ಪ್ರಾರ್ಥನೆಯನ್ನು[21] ಕೇಳುವದಿಲ್ಲ![22]

ದೇವರು ಕೊರ್ನೇಲ್ಯನ ಪ್ರಾರ್ಥನೆಯನ್ನು ಆಲಿಸಿರುವನು, ಎಂದು ತಿಳಿದ ನಂತರ, ದೇವದೂತನು ಆ ಶತಾಧಿಪತಿಗೆ ಮಾರ್ಗದರ್ಶನವನ್ನು ನೀಡಿದನು: "ಈಗ ನೀನು ಯೋಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆನಿಸಿಕೊಳ್ಳುವ ಸೀಮೋನನನ್ನು ಕರೆಯಿಸಬೇಕು, ಅವನು ಚರ್ಮಕಾರನಾದ ಸೀಮೋನನ ಬಳಿಯಲ್ಲಿ ಇಳುಕೊಂಡಿದ್ದಾನೆ; ಅವನ ಮನೆಯು ಸಮುದ್ರದ ಬಳಿಯಲ್ಲಿದೆ" (10:5, 6).[23] 10:22ರ ಪ್ರಕಾರ ಶತಾಧಿಪತಿಯು "ಪೇತ್ರನಿಂದ ವಾಕ್ಯವನ್ನು" ಕೇಳುವ ಉದ್ದೇಶವಾಗಿತ್ತು (ಅವನಿಂದ). ಅಧ್ಯಾಯ 11ರಲ್ಲಿ ದೇವದೂತನು ಕೊರ್ನೇಲ್ಯನಿಗೆ, "ಅವನು ನಿನಗೆ ಕೆಲವು ಮಾತುಗಳನ್ನು ಹೇಳುವನು, ಆ ಮಾತುಗಳಿಂದ[24] ನಿನಗೂ ನಿನ್ನ ಮನೆಯವರಿಗೂ ರಕ್ಷಣೆಯಾಗುವದು" ಎಂದು ಹೇಳಿದ್ದನು (ವಚನ 14).

10:2ರಲ್ಲಿ ಇರುವ ಸದ್ಗುಣಗಳುಳ್ಳ ಮನುಷ್ಯನ ಶವಸಂಸ್ಕಾರದಲ್ಲಿ ನಾನು ವಾಕ್ಯ ಹೇಳ ಬೇಕಾದರೆ, ದೇವದೂತನು ಅವನಿಗೆ ಕಾಣಿಸಿಕೊಂಡು, ಅವನ ಪ್ರಾರ್ಥನೆ ಮತ್ತು ದಾನ ಧರ್ಮಗಳನ್ನು ದೇವರು ಒಪ್ಪಿಕೊಂಡಿರುವನು ಎಂಬ ವಿಷಯವನ್ನು ಜನರು ಮೆಚ್ಚಲೇ ಬೇಕು, "ಅವನು ಎಂಥಹ ಅದ್ಭುತವಾದ ಮನುಷ್ಯನು, ನಿಶ್ಚಯವಾಗಿ ಅವನು ಪರಲೋಕಕ್ಕೆ ಹೋಗಿರುವನು ಎಂದು ಹೇಳುವರಲ್ಲವೇ!" ಹೇಗೂ, ಕೊರ್ನೇಲ್ಯನ ಇನ್ನೊಂದು ಗುಣವನ್ನು ತಿಳಿಸಲೇ ಬೇಕು: ಅವನು ಕಳೆದು ಹೋದವನು, ಪಾಪದಲ್ಲಿ ಕಳೆದು ಹೋದವನು[25] ಆಗಿದ್ದನು! ದೇವದೂತನ ಮಾತನ್ನು ಗಮನಿಸಿರಿ: "ಮತ್ತು (ಪೇತ್ರನು) ಮಾತುಗಳನ್ನು ಹೇಳು ವನು, ಆ ಮಾತುಗಳಂದ ನಿನಗೂ ನಿನ್ನ ಮನೆಯವರಿಗೂ *ರಕ್ಷಣೆಯಾಗುವದು.*"[26]

ಈ ದಿನಗಳಲ್ಲಿ ಕೊರ್ನೇಲ್ಯನ ಹಾಗೆ ನಮ್ಮಲ್ಲಿ ಕೆಲವರು ಇರುವದೇ ಹಾಗಿದ್ದರೆ, ದೇವದೂತರು ತಿಳಿಸಿದ ರಕ್ಷಣೆಯ ಸಂಗತಿಯು ಅವನಿಗೆ ಅವಮಾನವನ್ನುಂಟು ಮಾಡಬಹುದಿತ್ತು; "ನಾನು ಕಳೆದು ಹೋಗಿದ್ದೇನೆಂದು ಹೇಳಲು ನಿನಗೆಷ್ಟು ಧೈರ್ಯವಿದೆ! ನಾನು ಎಷ್ಟು ಉತ್ತಮನು ಹಾಗೂ ಧರ್ಮನಿಷ್ಠೆಯುಳ್ಳವನೆಂಬುದಾಗಿ ನನ್ನ ಕುರಿತು ಯಾರಿಗಾದರೂ ಕೇಳಬಹುದು!" ಈ ಶತಾಧಿಪತಿಯು ದೀನತೆಯೆಂಬ ಇನ್ನೊಂದು ಸದ್ಗುಣವನ್ನು ಹೊಂದಿದ್ದನು. ಅವನು ತನ್ನ ಒಳ್ಳೇಯತನವನ್ನು ಹೇಳಿಕೊಳ್ಳದೇ ಸೈನಿಕ ನಿಯಮದ ಪ್ರಕಾರ ತಕ್ಷಣವೇ ವಿಧೇಯನಾದನು:

> ಕೊರ್ನೇಲ್ಯನು ತನ್ನ ಸಂಗಡ ಮಾತಾಡಿದ ದೇವದೂತನು ಹೊರಟುಹೋದ ಮೇಲೆ ತನ್ನ ಪರಿಚಾರಕರಲ್ಲಿ ಇಬ್ಬರನ್ನೂ ತನ್ನ ಹತ್ತಿರ ಯಾವಾಗಲೂ ಇರುತ್ತಿದ್ದ ಸಿಪಾಯಿಗಳಲ್ಲಿ

ಒಬ್ಬ ದೇವ ಭಕ್ತನನ್ನೂ ಕರೆದು ಅವರಿಗೆ ಈ ಸಂಗತಿಗಳನ್ನೆಲ್ಲಾ ವಿವರವಾಗಿ ಹೇಳಿ ಅವರನ್ನು ಯೊಪ್ಪಕ್ಕೆ ಕಳುಹಿಸಿದನು (10:7, 8).

ಮದ್ಯಾಹ್ನದ ಸಮಯದಲ್ಲಿ, ತನ್ನ ಸೇವಕರನ್ನು ಕರೆದು 30 ಮೈಲಿಗಳ ಅಂತರಲ್ಲಿದ್ದ ಯೊಪ್ಪಕ್ಕೆ ಕಳುಹಿಸಿದನು. 30 ಮೈಲಿಗಳ ಅಂತರವನ್ನು ವಾಹನದಲ್ಲಾದರೆ ಅತಿಶೀಘ್ರವಾಗಿ ತಲುಪಬಹುದು. ಮಧ್ಯಾಹ್ನ 4 ಗಂಟೆಗೆ ಯೊಪ್ಪಕ್ಕೆ ಪ್ರಯಾಣವನ್ನು ಮಾಡಿ, ಸಾಯಂಕಾಲದ ಊಟದ ಸಮಯದೊಳಗಾಗಿ ಪೇತ್ರನನ್ನು ಕರೆದುಕೊಂಡು ಹಿಂದೆಕ್ಕೆ ಬರಬಹುದಿತ್ತು: ಆದರೆ ಈ 3 ವ್ಯಕ್ತಿಗಳಿಗೆ ಅಂದು ಕಠಿಣದ ಪ್ರಯಾಣವಾಗಿತ್ತು.[28]

ನಂತರ, ಪೇತ್ರನು ಬಂದಾಗ, ಅವನು ಕೊರ್ನೇಲ್ಯನಿಗೆ "ಈಗ ನೀವು ನನ್ನನ್ನು ಕರೆಸಿದ ಉದ್ದೇಶವೇನು ನನಗೆ ತಿಳಿಸಬೇಕೆಂದು ಹೇಳಿದನು." 10:29 ಕೊರ್ನೇಲ್ಯನ ರಕ್ಷಣೆಗಾಗಿ ದೇವರ ಯೋಜನೆಯಂತೆ ಕೇಳಲಾದ ವಿಶಿಷ್ಟ ಪ್ರಶ್ನೆಗಳ ಕುರಿತು ಆಲೋಚಿಸೋಣ. ಮೊದಲನೆಯರಾಗಿ ದೇವದೂತರು ಈಗಾಗಲೇ ಕಾಣಿಸಿಕೊಂಡಿದ್ದರು, ಅವನು ಮನುಷ್ಯರನ್ನು ಏಕೆ ಅಲ್ಲಿಗೆ ಕಳುಹಿಸಿದನು? ದೇವದೂತರೇ ಏಕೆ ರಕ್ಷಣೆಯ ಕುರಿತಾಗಿ ಮಾತನಾಡಲಿಲ್ಲ? ದೇವದೂತರು ಕೊರ್ನೇಲ್ಯನಿಗೆ ಹೇಗೆ ರಕ್ಷಣೆ ಹೊಂದಬೇಕೆಂದು ಹೇಳಿರುವದಿಲ್ಲ ಮತ್ತು ಅಧ್ಯಾಯ 8ರಲ್ಲಿ ಆತ್ಮನು ಕಂಚುಕಿಗೆ ಯಾವ ವಿಧವಾದ ಮಾರ್ಗದರ್ಶನವನ್ನೂ ನೀಡಿರಲಿಲ್ಲ, ಇದೇ ಕಾಣದಿಂದ ಯೇಸು ಸೌಲನಿಗೆ ಕಾಣಿಸಿಕೊಂಡಾಗಲೂ ರಕ್ಷಣೆಯ ಮಾತನ್ನು ಹೇಳಿರಲಿಲ್ಲ (9:6): ಸುವಾರ್ತೆಯ ನಿಕ್ಷೇಪವನ್ನು ಕ್ರೈಸ್ತರೆಂಬ ಮಣ್ಣಿನ ಘಟಕಗಳಲ್ಲಿ ಇಟ್ಟಿದ್ದಾನೆ (2 ಕೊರಿಂಥ 4:7). ಯೇಸುಕ್ರಿಸ್ತನು ತನ್ನ ಮಹಾ ಆಜ್ಞೆಯನ್ನು ಮನುಷ್ಯರಿಗೆ ನೀಡಿರುವನೇ ಹೊರತು ದೇವದೂತರಿಗೆ ನೀಡಿರುವದಿಲ್ಲ. "ಆತನು ಕ್ರಿಸ್ತನ ಮೂಲಕ ನಮ್ಮನ್ನು ಸಮಾಧಾನಪಡಿಸಿಕೊಂಡು" ಸಮಾಧಾನದ ವಿಷಯದ ಸೇವೆಯನ್ನು ನಿಮಗೆ ಅನುಗ್ರಹಿಸಿದ್ದಾನೆ. ಅದನ್ನು ಪರಲೋಕದ ಸಮೂಹದವರಿಗೆ ನೀಡಿರುವದಿಲ್ಲ (2 ಕೊರಿಂಥ 5:18, 19). ಅಪೊಸ್ತಲರ ಕೃತ್ಯದಲ್ಲಿ ಕೆಲವಾರು ಪರಿವರ್ತನೆಗಳು ಅದ್ಭುತವಾಗಿ ನಡೆದಿದ್ದರೂ,[29] ರಕ್ಷಣೆಯ ಕುರಿತು ಜನರು ಜನರಿಗೆ ತಿಳಿಸುವಂತ ಯೋಜನೆಯನ್ನು ಹೊರತುಪಡಿಸಿರುವದಿಲ್ಲ! ಕೊರ್ನೇಲ್ಯನ ರಕ್ಷಣೆಗಾಗಿ ದೇವದೂತರು ಕಾಣಿಸಿಕೊಳ್ಳದೇ, ಪ್ರಸಂಗಿಯನ್ನು ಮತ್ತು ಪಾಪಿಯನ್ನು ಒಂದು ಗೂಡಿಸುವ ಕಾರ್ಯವನ್ನು ಮಾಡಿದರು. ಈ ದೈವಿಕ ಮಾರ್ಗದರ್ಶನವಿಲ್ಲದೇ ಕೊರ್ನೇಲ್ಯನು ಯೆಹೂದಿಯ ಮನೆಗೆ ಆಹ್ವಾನವನ್ನು ಹೊಂದಲು ಅಸಾಧ್ಯವಾಗಿತ್ತು.

ಎರಡನೆಯದಾಗಿ, ಪ್ರಶ್ನೆಯನ್ನು: ಪುನ ಪರಿಶೀಲಿಸೋಣ ರಕ್ಷಣೆಯ ಮಾತುಗಳನ್ನು ಕೊರ್ನೇಲ್ಯನಿಗೆ ಒಬ್ಬ ಮನುಷ್ಯನು ತಿಳಿಸುವಂತದ್ದು ದೇವರ ಚಿತ್ತವಾಗಿದ್ದರೆ, ಏಕೆ ಕೊರ್ನೇಲ್ಯನು ಪೇತ್ರನಿಗಾಗಿ ಹೇಳಿಕಳುಹಿಸಿದನು? ಈಗಾಗಲೇ ಒಬ್ಬ ಅನುಭವಿಯಾದ ಫಿಲಿಪ್ಪನೆಂಬ[30] ದೇವಸೇವಕನು ಕೈಸರೆಯಲ್ಲಿದ್ದರೂ, 30 ಮೈಲಿಗಳ ಅಂತರದಲ್ಲಿದ್ದ ಪೇತ್ರನನ್ನೇ ಏಕೆ ಕರೆಯಿಸಿದನು? ಯೊಪ್ಪದಿಂದ ಪೇತ್ರನನ್ನು ಏಕೆ ಕರೆಯಿಸಿದನು? ಈ ಪ್ರಶ್ನೆಗೆ ಉತ್ತರವನ್ನು, ಯೇಸು ಪೇತ್ರನಿಗೆ ಮಾಡಿದ ವಾಗ್ದಾನದಲ್ಲಿ: "ಯೇಸು ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು. ಎಂಬ ಹೇಳಿಕೆಯಲ್ಲಿ ಉತ್ತರವನ್ನು ಕಾಣುತ್ತೇವೆ" (ಮತ್ತಾಯ 16:19). ಅಪೊಸ್ತಲರಕೃತ್ಯ 2ರಲ್ಲಿ ನಾವು ರಕ್ಷಣೆ ಹೊಂದಲು ಏನು ಮಾಡಬೇಕು ಎಂಬ ಜನರ ಹೇಳಿಕೆ ಯಲ್ಲಿ ಪೇತ್ರನು ಆ ಬೀಗದ ಕೈಯನ್ನು ಉಪಯೋಗಿಸಿರುವನು (2:38). ಆ ಸಮಯದಲ್ಲಿ ಹೇಗೂ, ಮಾನವ ಜನಾಂಗದ ಒಂದು ಭಾಗದವರಿಗೆ ಮಾತ್ರ ಬಾಗಿಲು ತೆರೆಯಲ್ಪಟ್ಟಿತ್ತು; ಯೆಹೂದ್ಯರು ಮಾತ್ರ ದೀಕ್ಷಾಸ್ನಾನ ಹೊಂದುತ್ತಿದ್ದರು ಅಪೊಸ್ತಲರಕೃತ್ಯ 10ರಲ್ಲಿ ಪೇತ್ರನು ಸರ್ವರಿಗೂ ಬಾಗಿಲು ತೆರೆಯುವದಕ್ಕಾಗಿ (ಬೀಗದ) ಕೈಯನ್ನು ಬಳಸಬೇಕಿತ್ತು - ಇದರ ಮೂಲಕ ಯೆಹೂದ್ಯರಲ್ಲದವರನ್ನು ಸಭೆಗೆ ಆಹ್ವಾನ ಮಾಡಬೇಕಿತ್ತು! ನಂತರದ ಕೆಲವಾರು

ವರ್ಷಗಳಲ್ಲಿ, ಪೇತ್ರನು ಈ ಘಟನೆಯ ಕುರಿತು ಬರೆದು: "ಸಹೋದರರೇ, ಅನ್ಯಜನರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ ನಂಬಬೇಕೆಂದು ದೇವರು ಬಹಳ ದಿವಸಗಳ ಕೆಳಗೆ ನಿಮ್ಮೊಳಗಿಂದ ನನ್ನನ್ನು ಆರಿಸಿ, ಕೊಂಡದ್ದು ನಿಮಗೇ ತಿಳಿದದೆ ಅಂದನು" (15:7; ಒತ್ತಿ ಹೇಳಿದ್ದು ನನ್ನದು).[31] ಕೊರ್ನೇಲ್ಯನಗೆ, ಪೇತ್ರನೇ ವಾಕ್ಯ ಹೇಳಬೇಕೆಂಬ ದೇವರ ಚಿತ್ತವಾದದ್ದರಿಂದ ಶತಾಧಿಪತಿಯು ಅವನಿಂದ ರಕ್ಷಣೆಯ ಮಾತುಗಳನ್ನು ಕೇಳಿಸಿಕೊಂಡನು.

ಪಾಪಿಯಾದವನು ಸಿದ್ಧಗೊಂಡಾಗ; ದೇವರು ಪ್ರಸಂಗಿಯನ್ನು ಸಿದ್ಧಗೊಳಿಸ ಬೇಕಾಯಿತು.

## ದೇವರ ಎರಡನೆಯ ಹೆಜ್ಜೆ: ಯೆಹೂದ್ಯನನ್ನು ಸಿದ್ಧಗೊಳಿಸಬೇಕಿತ್ತು (10:9-23, 34, 35; 11:5-12)

ವಚನ 9ರಲ್ಲಿ ಯೊಪ್ಪದ ಚಿತ್ರಣವನ್ನು ನೋಡುತ್ತೇವೆ. ಕೊರ್ನೇಲ್ಯನಿಂದ ಕಳುಹಿಸ್ಪಟ್ಟ ವ್ಯಕ್ತಿಗಳು, ಮರುದಿನ ಮಧ್ಯಾಹ್ನ ಪಟ್ಟಣದ ಸಮೀಪಕ್ಕೆ ಬಂದಿದ್ದರು. ಅವರು ರಾತ್ರಿಯೆಲ್ಲಾ ಪ್ರಯಾಣಿಸಿ, ಅಲ್ಲಿಗೆ ಬಂದಿದ್ದರು, ಬಳಲಿಹೋದ ಮನುಷ್ಯರು ಯೊಪ್ಪಕ್ಕೆ ಬರುವಾಗ, ಅವರನ್ನು ಎದುರ್ಗೊಳ್ಳುವದಕ್ಕೆ ದೇವರು ಪೇತ್ರನನ್ನು ಸಿದ್ಧಪಡಿಸುತ್ತಿದ್ದನು. "ಮರುದಿನ ಅವರು ಪ್ರಯಾಣಮಾಡಿ ಆ ಊರಿನ ಹತ್ತಿರಕ್ಕೆ ಬರುತ್ತಿರುವಾಗ ಪೇತ್ರನು ಸುಮಾರು[32] ಮಧ್ಯಾಹ್ನದಲ್ಲಿ ಪ್ರಾರ್ಥನೆ ಮಾಡುವದಕ್ಕಾಗಿ ಮಾಳಿಗೆಯನ್ನು ಹತ್ತಿದನು" (10:9).

ಪೇತ್ರನು ಇನ್ನು ಚರ್ಮಕಾರನಾದ ಸೀಮೋನನ ಮನೆಯಲ್ಲಿದ್ದನು - ಅಪೊಸ್ತಲನು ಅಲ್ಲಿಗೆ ಬಂದಂದಿನಿಂದ, ಅದು ಕ್ರೈಸ್ತರ ಅನ್ಯೋನ್ಯತೆಯ ಸ್ಥಳವಾಗಿ ಮಾರ್ಪಟ್ಟಿತ್ತು. ಮಧ್ಯಾಹ್ನದ ಸಮಯದಲ್ಲಿ, ಪೇತ್ರನು ದೇವರೊಂದಿಗೆ ಏಕಾಂಗಿಯಾಗಿರಲು ಬಯಸಿದ್ದನು ಮತ್ತು ಮೇಲಂತಸ್ಥಿನಲ್ಲಿದ್ದನು. ಆ ದಿವಸಗಳ ಮನೆಗಳಲ್ಲಿ ಸಮತಟ್ಟಾದ ಮೆಲ್ಚಾವಣಿಯನ್ನು ಹೊಂದಿರುತ್ತಿದ್ದರು[33] ಮತ್ತು ಅದರಲ್ಲಿ ಹಣ್ಣುಗಳನ್ನು ಒಣಗಿಸುತ್ತಿದ್ದರು. ಬೇಸಿಗೆಯಲ್ಲಿ ಅದರ ಮೇಲೆ ಮಲಗುತ್ತಿದ್ದರು, ಅದು ಖಾಸಗಿಯಾದ ಸ್ಥಳವಾಗಿತ್ತು. ಪೇತ್ರನು ಯೆಹೂದ್ಯನಾಗಿದ್ದದ್ದರಿಂದ, ಮಧ್ಯಾಹ್ನ 12 ಘಂಟೆಗೆ ಪ್ರಾರ್ಥನೆ ಮಾಡುತ್ತಿದ್ದನು (ನೋಡಿರಿ ಕೀರ್ತನೆ 55:17; ದಾನಿಯೇಲ 6:10); ಮತ್ತು ಅವನು ಕ್ರೈಸ್ತನಾದ ನಂತರವೂ ಆ ಅಭ್ಯಾಸವನ್ನು ಮುಂದುವರಿಸಿದ್ದನು. ಪ್ರಾರ್ಥನೆಯನ್ನು ಅಭ್ಯಾಸ ಮಾಡಿಕೊಳ್ಳುವದು ಚಟವಾಗಿ ಇರದೆ ಅಭ್ಯಾಸವೇ ಆಗಿರಲಿ.

ಪೇತ್ರನು ಮಾಡಿದ ಪ್ರಾರ್ಥನೆಯ ವಿವರಣೆಯನ್ನು ತಿಳಿಸಿರುವದಿಲ್ಲ. ಬಹುಶಃ ದೇವರ ವಾಕ್ಯವನ್ನು ಧೈರ್ಯವಾಗಿ ಪ್ರಸಂಗಿಸುವ[34] ಕುರಿತು ಪ್ರಾರ್ಥಿಸಿರಬಹುದು ಪ್ರಾಯಶಃ ಹೊಸ ಬಾಗಿಲುಗಳನ್ನು ತೆರೆಯುವ ಅವಕಾಶಕ್ಕಾಗಿ ಪ್ರಾರ್ಥಿಸಿರಬಹುದು (ಹೋಲಿಸು 14:27). ಒಂದು ವೇಳೆ ಅವನು ಎರಡನೆಯ ವಿಷಯಕ್ಕಾಗಿ ಅವನು ಪ್ರಾರ್ಥಿಸಿದ್ದರೆ, ಅವನು ಎಂದಿಗೂ ಒಳಪಡದಂತ ವಿಷಯಕ್ಕೆ ಒಳಪಡುವಂತ ಎತ್ತರವು ಕ್ಷಣದಲ್ಲಿಯೇ ದೊರೆಯಬಹುದಿತ್ತು!

ಅವನು ಪ್ರಾರ್ಥಿಸುತ್ತಿರುವಾಗ, ಬಹಳ ಹಸಿದು ಊಟ ಮಾಡಬೇಕೆಂದಿದ್ದನು[35] (10:10ಎ). KJVಯಲ್ಲಿ ಅವನು *ಬಹಳ* ಹಸಿದಿದ್ದನು ಎಂಬುದಾಗಿ (ಒತ್ತಿ ಹೇಳಲಾಗಿದೆ). ದೇವರು ಪೇತ್ರನೊಂದಿಗೆ ಒಂದು ಅಂಶವನ್ನು ಪ್ರಾರಂಭಿಸಿದ್ದನು. ನೀವು ಯಾರಿಗಾದರೂ ಬೋಧಿಸಬೇಕೆಂದಿದ್ದರೆ, ಅವನು ಇರುವಂತ ಸ್ಥಳದಿಂದಲೇ ಆರಂಭಿಸಿರಿ.

ಕೆಳ ಅಂತಸ್ತಿನಲ್ಲಿದ್ದವರು ಊಟವನ್ನು[36] ಸಿದ್ಧಪಡಿಸುತ್ತಿರುವಾಗ, ಪೇತ್ರನು ತನ್ನ ಮೊಣಕಾಲೂಗಳಲ್ಲಿದ್ದನು,[37] ಮತ್ತು ಪ್ರಾರ್ಥಿಸುತ್ತಿದ್ದನು (11:5). "ಊಟಕ್ಕೆ ಸಿದ್ಧವಾ ಗುತ್ತಿರುವಷ್ಟರಲ್ಲಿ ಅವನು ಧ್ಯಾನ ಪರವಶನಾದನು" (10:10ಬಿ). ಧ್ಯಾನಪರವಶನಾದನು ಎಂದರೆ ಮುಂದೆ ನಡೆಯುವಂತಹ ವಿಷಯಗಳನ್ನು ಊಹೆಮಾಡಿಕೊಂಡನೆಂಬ ಅರ್ಥವಲ್ಲ.

ಗ್ರೀಕ್ ಭಾಷೆಯಲ್ಲಿ "ಪರವಶವೆಂಬುದು ಭಾವೋದ್ವೇಗ" ಎಂಬ ಮೂಲ ಪದವಾಗಿದೆ.[38] ಪೇತ್ರನ ಯೋಚನೆಗಳನ್ನು ಉತ್ತಮಪಡಿಸಿ ದೇವರು ಅವನ ಯೋಚನೆಗಳನ್ನು ಬಲಪಡಿಸುವಂತ ವ್ಯಾಖ್ಯಾನವಾಗಿದೆ ರೇಡಿಯೋ ತರಂಗಗಳನ್ನು ಸ್ಪಷ್ಟನೆ ಪಡಿಸುವಂತ ವಿಷಯಕ್ಕೆ ಹೋಲಿಸ ಬಹುದಾಗಿದೆ.

ಅಲ್ಲಿ ಅವನು ಆಕಾಶವು ತೆರೆದಿರುವದನ್ನು ನಾಲ್ಕು ಮೂಲೆಗಳನ್ನು ಹಿಡಿದಿದ್ದ ದೊಡ್ಡ ಜೋಳಿಗೆಯಂತಿರುವ ಏನೋ ಒಂದು ವಸ್ತು ಭೂಮಿಯ ಮೇಲೆ ಇಳಿಯುವದನ್ನು ಕಂಡನು (10:11). ಕೆಲವು ಬರಹಗಾರರ ಅಭಿಪ್ರಾಯದಂತೆ ಆ ಸ್ಥಳದಲ್ಲಿದ್ದ ಒಂದು ದೊಡ್ಡದಾದ ಬಟ್ಟೆಯು ಅವನ ದರ್ಶನದ ಒಂದು ಭಾಗವಾಗಿರಬಹುದು: ಅಥವಾ ಹತ್ತಿರವಿದ್ದ ಒಂದು ಹಡಗಿನ ಹಾಯಿಯಂತೆಯೂ ಇರಬಹುದು. ಪೇತ್ರನ ಮನಸ್ಸಿನಲ್ಲಿ ಇರುವಂತದ್ದು ಒಂದು ಹತ್ತಿ ಬಟ್ಟೆಯ ತುಣುಕಾಗಿಯೂ ಇರಬಹುದು: "ಅವನು ನಾಲ್ಕು - ಮೂಲೆಗಳಿದ್ದ ಒಂದು *ದೊಡ್ಡ ಬಟ್ಟೆಯು* ಇಳಿದು ಬರುವದನ್ನು ಕಂಡನು"![39] (ಒತ್ತಿ ಹೇಳಿದ್ದು ನನ್ನದು). ಹೇಗೂ, ಪೇತ್ರನು ಬಹುವಾಗಿ ಹಸಿದಿದ್ದರಿಂದ ಸ್ಥಳೀಯವಾಗಿ ಅವನ ಮನಸ್ಸಿನಲ್ಲಿ ಒಂದು ಬಟ್ಟೆಯನ್ನು ಊಹಿಸಿಕೊಂಡನೆಂಬುದಾಗಿ ತಿಳಿಯಬಾರದು. ಪೇತ್ರನು ಮಾದಕ ವ್ಯಸನಿಯು ಆಗಿರಲಿಲ್ಲ, ಆದರೆ ಅವನು *ದೇವರಿಂದ* ದರ್ಶನವನ್ನು ಪಡೆಯುತ್ತಿದ್ದನು (11:5).

ಆ ಪರಲೋಕದ ಜೋಳಿಗೆಯು ಪೇತ್ರನವರೆಗೂ ಬಂದು ನಿಂತಿತು (11:5). ಅದನ್ನು ಅವನು ಚೆನ್ನಾಗಿ ನೋಡಿದನು (11:6); "ಅದರಲ್ಲಿ ನೆಲದ ಮೇಲೆ ತಿರುಗಾಡುವ [ಪಶು ಪ್ರಾಣಿಗಳು[40]] [ಕ್ರಿಮಿಕೀಟಗಳನ್ನು ಅಂತರಿಕ್ಷದಲ್ಲಿ[41]] ಹಾರಾಡುವ ಹಕ್ಕಿಗಳನ್ನು ಕಂಡನು" (10:12) - ಭೂಲೋಕದಲ್ಲಿರುವ ಸಕಲ ಪ್ರಾಣಿಗಳ ಪ್ರತಿನಿದಿಗಳಾಗಿದ್ದವು.[42] ಅದರಲ್ಲಿ ಯೆಹೂದ್ಯರಿಗನುಗುಣವಾಗಿ ಇದ್ದ ಶುದ್ಧವಾದ ಪಶುಗಳಲ್ಲಿ ಹಸು, ಕುರಿ, ಮತ್ತು ಮೇಕೆಗಳು ಒಳಗೊಂಡಿದ್ದವು.[43] "ಅಶುದ್ಧವಾದ" ಪ್ರಾಣಿಗಳಾದ ಒಂಟೆ, ಹಂದಿ ಹಾಗೂ ಸಿಂಹಗಳು ಇದ್ದವು! ಎಂಥಾ ಒಂದು ನೋಟ - ಎಂಥಾ ಒಂದು ವಿಮಾನ! ನೋಹನ ಹಡಗಿನಲ್ಲಿದ್ದ ಸಕಲವನ್ನು ಆ ಜೋಳಿಗೆಯಲ್ಲಿ ಸುರಿದಂತಿತ್ತು!

ಆಗ,[44] "ಪೇತ್ರನೇ, ಎದ್ದು ಕೊಯ್ದು ತಿನ್ನು!" ಎಂದು ಅವನಿಗೆ ಒಂದು ವಾಣಿ ಕೇಳಿಸಿತು: (10:13). ಇನ್ನೊಂದು ವಾಕ್ಯದಲ್ಲಿ, "ಪೇತ್ರನೇ ನಿನ್ನ ಹಸಿವು ನನಗೆ ತಿಳಿದದೆ,[45] ಇದೂ ಪರಲೋಕ ಒಂದು ಆಹಾರದ ಹಲಗೆಯು ನಿನ್ನ ಮುಂದಿದೆ, ನಿನಗೆ ಬೇಕಾಗಿದ್ದನ್ನು ಆಯ್ಕೆ ಮಾಡಿಕೋ, ಅದನ್ನು ನಿನ್ನ ಮಧ್ಯಾಹ್ನದ ಊಟಕ್ಕಾಗಿ ಉಪಯೋಗಿಸು! ಅದು ಕೇವಲ ದರ್ಶನವಾದ್ದರಿಂದ ಪೇತ್ರನು ಎದ್ದು ಯಾವ ರೀತಿಯಲ್ಲಿ ಕೊಂದು ತಿನ್ನುವ ಆಜ್ಞೆಗೆ ಒಳಗಾದನು ಎಂಬ ವಿವರಣೆಯನ್ನು ನೀಡಲಾಗದು. ಒಂದು ಮಾತು ನಿಶ್ಚಯವೇ: ಅವನು "ಎದ್ದು ಕೊಂದು ತಿನ್ನುವದು" ಅಸಾಧ್ಯವಾಗಿತ್ತು! ಅಶುದ್ಧವಾದವುಗಳ ಸಂಗಡ ಇದದ್ದರಿಂದ, ಅವುಗಳು ಸಹ ಹೊಲೆಯಾಗಿದ್ದವು. ಮುಂದೆ ಅಶುದ್ಧವಾದವುಗಳನ್ನು "ಪದ್ಧತಿಯ ಪ್ರಕಾರ ಕೊಲ್ಲಬೇಕಿತ್ತು."[46] ಅದರ ಪ್ರಗತಿಯು, ಗೊಂದಲಮಯವಾಗಿತ್ತು. ಶುದ್ಧಾಶುದ್ಧ ಪ್ರಾಣಿಗಳನ್ನು ತಿನ್ನುವ ಕುರಿತು ಪೇತ್ರನ ಮನಸ್ಸಿನಲ್ಲಿ ಸ್ಥಿರವಾದ ನಿರ್ಧಾರಗಳಿಲ್ಲದ್ದರಿಂದ (ಯಾವಾಗಲೂ) ಯೋಚನೆ ಮಾಡದೆ, "ಪೇತ್ರನು - ಬೇಡವೇ ಬೇಡ ಸ್ವಾಮಿ, ನಾನು ಎಂದೂ ಹೊಲೆ ಪದಾರ್ಥವನ್ನಾಗಲೀ[47] ಅಶುದ್ಧಪದಾರ್ಥವನ್ನಾಗಲೀ ತಿಂದವನಲ್ಲ ಅಂದನು" (10:14). *"ನಾನು ಯಾವಾಗಲೂ ಮಾಡುವದಿಲ್ಲ"* ಎಂಬುದೇ ಅದರ ಮುನ್ಸೂಚನೆ.

ಪೇತ್ರನು, ತರ್ಕಮಾಡುವ ವಿಷಯದಲ್ಲಿ ಮೊದಲಿಗನಲ್ಲ. ಅನನೀಯನು ಸೌಲನ ಬಳಿಗೆ ಕಳುಹಿಸಲ್ಪಟ್ಟಾಗಲೂ, ಅವನೂ ಸಹ ತರ್ಕ ಮಾಡಿದ್ದನು (9:13, 14). ಸೌಲನು, ಯೆರುಸಲೇಮಿಗೆ ಕಳುಹಿಸಲ್ಪಟ್ಟಾಗಲೂ, ತರ್ಕ ಉಂಟಾಯಿತು (22:19, 20). "ಇಲ್ಲಾ" ಎಂಬ ಉತ್ತರವನ್ನು ಕರ್ತನಿಗೆ ನೀಡುವುದು ಯೋಗ್ಯವಲ್ಲ ಎಂಬುದನ್ನು ಅವರೆಲ್ಲರೂ ಅರಿತಿದ್ದರು. "ಇಲ್ಲ" ಎಂಬುದು ದೇವರಿಗೆ ವಿರುದ್ಧವಾದದ್ದು. "ಕರ್ತನು" ಎಂದರೆ, "ಒಡೆಯನು," ಮತ್ತು

"ಯಜಮಾನನು" ಎಂಬ ಅರ್ಥವಾಗಿದೆ. ಆತನನ್ನು ಕರ್ತನು ಎಂಬುದಾಗಿ ಕರೆಯುವದು, ಆತನು ನಮಗೆ ಆದೇಶ ನೀಡಲು ಯೋಗ್ಯನು ಎಂಬ ಅರ್ಥವಾಗಿದೆ! ದೇವರ ಮನವಿಗೆ, "ಹೌದು" ಎಂಬುದಾಗಿ ಹೇಳುವದೇ ಸರಿಯಾದ ಉತ್ತರವಾಗಿದೆ! (ನೋಡಿರಿ ಲೂಕ 6:46.)

ಅವನು ಪುನಃ "ದೇವರು ಶುದ್ಧಮಾಡಿದ್ದನ್ನು ನೀನು ಹೊಲೆ ಎನ್ನಬೇಡ" ಎಂಬ ಸ್ವರವನ್ನು ಆಲಿಸಿದನು (10:15).[48] ಒಂದು ವೇಳೆ, ಪೇತ್ರನಿಗೆ ತಲೆಯ ಮೇಲೆ ಪೆಟ್ಟು ತಿಂದ ಅನುಭವವಾಗಿರಬಹುದು. ಆದರೆ ದೇವರು ಅಪಾರ್ಥವನ್ನು ತೆಗೆಯುವ ಸಲುವಾಗಿ, ಅವನಿಗೆ ಮಾರ್ಗದರ್ಶನವನ್ನು ನೀಡಿದನು: "ಎದ್ದು, ಕೊಂದು ತಿನ್ನು! ... ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಎನ್ನಬೇಡವೆಂದು" *ತಿರಿಗಿ* ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು; ಹೀಗೆ *ಮೂರು* ಸಾರಿ ಆಯಿತು (10:16ಎ). ಪಾಪಿಯನ್ನು ಸಿದ್ಧಪಡಿಸುವದಕ್ಕಿಂತಲೂ ಪ್ರಸಂಗಿಯನ್ನು ಸಿದ್ಧಪಡಿಸಲು ಮೂರು ಸಾರಿ ಹೇಳಬೇಕಾಯಿತು! ಪೇತ್ರನು ಪ್ರತಿ ಸಾರಿ ಪ್ರತಿವಾದ ಮಾಡಿರಬಹುದು. ಅದು ಪ್ರತಿಸಲವೂ ಬಲಹೀನವಾಗಿರಬಹುದು. ತಕ್ಷಣವೇ "ಆ ಜೋಳಿಗೆಯು ಆಕಾಶದೊಳಗೆ ಸೇರಿಕೊಂಡಿತು" (10:16ಬಿ).

ಪೇತ್ರನ ತಲೆಯಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿರಬಹುದು: ಅವನು ಹೋಗಿ ಒಂದು *ಹಂದಿಯನ್ನು* ಕೊಂದು ತಿನ್ನಬೇಕೆಂದು? ದೇವರು ಬಯಸಿದನೇ? ಶುದ್ಧಾಶುದ್ಧ ಪ್ರಾಣಿಗಳ ಕುರಿತ ಧರ್ಮಶಾಸ್ತ್ರದ ನಿಯಮವು ಬಹು ಪ್ರಮುಖವಾಗಿತ್ತು. ಧರ್ಮಶಾಸ್ತ್ರದ ಒಂದು ಭಾಗವನ್ನು ಯಾವುದೇ ವಿಧವಾಗಿ ಬದಲಾವಣೆ ಮಾಡುವದಾದರೆ ಇತರೆ ಭಾಗಗಳನ್ನು ಬದಲಾಯಿಸಬಹುದೇ?[49] ದೇವರು ಪ್ರಾಣಿಗಳಿಗಾಗಿ ಮಾತ್ರ ಚಿಂತಿಸುವನೇ. ಅಥವಾ ದೇವರ ಮನಸ್ಸಿನಲ್ಲಿ ಇತರೆ ಯಾವುದಾದರೂ ವಿಷಯಗಳಿವೆಯೇ?

ಅನ್ಯರು ಇನ್ನೆಂದಿಗೂ ಅಶುದ್ಧರಲ್ಲವೆಂದು, ಏಕೆ ದೇವರು ನೇರವಾಗಿ ತಿಳಿಸಲಿಲ್ಲ, ಏಕೆ ದೇವರು ಶುದ್ಧಾಶುದ್ಧ ಪಶುಗಳ ಬಗ್ಗೆ ಅಪೊಸ್ತಲನ ದರ್ಶನದಲ್ಲಿ ಪರೋಕ್ಷವಾಗಿ ಮಾತನಾಡಿದನು.[50] ಅನ್ಯರ ಕುರಿತಾಗಿ, ಹಳೆ ಒಡಂಬಡಿಕೆಯ ನಡುವಿನಲ್ಲಿರುವ, ಅವರನ್ನು ಒಪ್ಪಿಕೊಳ್ಳುವಂತ ಅನುರೂಪವವಾದ ನಿಯಮವನ್ನು ನೋಡುತ್ತೇವೆ. ಮತ್ತು ಶುದ್ಧಾಶುದ್ಧವಾದ ಆಹಾರದ ಕುರಿತಾಗಿಯು ನೋಡುತ್ತೇವೆ. ಆಹಾರದ ನಿಮಿತ್ತ ಯೆಹೂದ್ಯರ ಮತ್ತು ಅನ್ಯರ ನಡುವಿನಲ್ಲಿ ಒಂದು ಅಂತರವನ್ನು ನೋಡುತ್ತೇವೆ. ಅದು ಅವರಲ್ಲಿನ ಅನ್ಯೋನ್ಯತೆಗೆ ಅಡ್ಡಿಯಾಗಿತ್ತು. ಕೈಸರೆಯಲ್ಲಿ ಪೇತ್ರನ ಕಾರ್ಯಗಳಿಗಾಗಿ ಟೀಕೆ ಉಂಟಾದಾಗ, ಅವನು ಅನ್ಯರಿಗೆ *ದೀಕ್ಷಾಸ್ನಾನವನ್ನು* ನೀಡಿದ ಕುರಿತು ಅವನ ಟೀಕಾಕಾರರು ಏನನ್ನು ಹೇಳಿರುವದಿಲ್ಲ, ಆದರೆ ಅವರೊಂದಿಗೆ ಅವನು ಊಟಮಾಡಿದ ಕುರಿತು ಟೀಕೆ ಮಾಡಿರುವರು (11:2, 3). ಕಟ್ಟಾ ಯೆಹೂದಿಯರು, ಅನ್ಯರು ಸಿದ್ಧಪಡಿಸಿದ ಆಹಾರವನ್ನು ನಿಷೇದಿಸಿದ್ದರು: ಒಂದು ವೇಳೆ ಮಾಂಸವು ಅಶುದ್ಧ ಪ್ರಾಣಿಯದ್ದಾಗಿರಬಹುದು; ಒಂದು ವೇಳೆ ಆ ಮಾಂಸವನ್ನು ವಿಗ್ರಹಗಳಿಗೆ ಸಮರ್ಪಿಸಿರಬಹುದು, ನಂತರ ಅದನ್ನು ಮಾರಾಟ ಮಾಡಿರಬಹುದು; ಧರ್ಮಶಾಸ್ತ್ರದ ಪ್ರಕಾರ ಆ ಪ್ರಾಣಿಯ ರಕ್ತವನ್ನು ಸಂಪೂರ್ಣವಾಗಿ ಭೂಮಿಯ ಮೇಲೆ ಚೆಲ್ಲದೆ ಇರಬಹುದು; ಮತ್ತು ಧರ್ಮಶಾಸ್ತ್ರದ ಪ್ರಕಾರವಾಗಿ ಅದರಿಂದ ಆಹಾರವನ್ನು ಸಿದ್ಧಪಡಿಸದೆ ಇರಬಹುದು. ಒಂದು ವೇಳೆ, ಯೆಹೂದ್ಯರ ಹಾಗೂ ಅನ್ಯರ ನಡುವಿನ ಗೋಡೆಯು ನಾಶವಾಗಬೇಕಾದರೆ, ಆಹಾರದ ನಿಯಮಗಳು ಬದಲಾಗಬೇಕಿತ್ತು.

ವಚನ 17ರಲ್ಲಿ "ಪೇತ್ರನು ತನಗಾದ ದರ್ಶನವು ಏನಾಗಿರಬಹುದೆಂದು ತನ್ನಲ್ಲಿ ಕಳವಳ ಪಡುತ್ತಿರುವಾಗಲೇ ಕೊರ್ನೇಲ್ಯನು ಕಳುಹಿಸಿದ ಆ ಮನುಷ್ಯರು ಸೀಮೋನನ ಮನೆ[51] ಯಾವುದು ಎಂದು ಕೇಳಿಕೊಂಡು ಬಂದು ಆ ಮನೆಯ ಬಾಗಿಲಲ್ಲಿ ನಿಂತಿಕೊಂಡರು" ನಂತರ ಪೇತ್ರನು "ಆ ಕ್ಷಣದಲ್ಲೆ ಮೂರು ಮಂದಿ ಮನುಷ್ಯರು ನಾವಿದ್ದ ಮನೆಯ ಮುಂದೆ ನಿಂತಿದ್ದರು" ಎಂದು ಹೇಳಿರುವನು (11:11; ಒತ್ತಿ ಹೇಳಿದ್ದು ನನ್ನದು). ದೇವರ ಸಮಯವು ಅದ್ಭುತಕರವಾ

ದದ್ದು. ಒಂದು ವೇಳೆ ಆ ಮನುಷ್ಯರು ಮೊದಲೇ ಬಂದಿದ್ದರೇ, ಪೇತ್ರನು ಅವರನ್ನು ಆಹ್ವಾನ ಮಾಡುವ ಸಾಧ್ಯತೆಗಳಿರಲಿಲ್ಲ, ಮತ್ತು ಅವನು ಹೊಂದಿದ್ದ ದರ್ಶನವನ್ನು ಅವರಿಗೆ ತಿಳಿಸಲು ಸಹ ಸಾಧ್ಯವಾಗುತ್ತಿರಲಿಲ್ಲ.

ಆ ಮೂವರು ಮನುಷ್ಯರು ಅನ್ಯರಾಗಿದ್ದು, ಯೆಹೂದ್ಯನ ಮನೆಯ ಮುಂದೆ ನಿಂತಿದ್ದರು, ಅವರಿಗೆ ಆಹ್ವಾನವು ದೊರೆತ ಹೊರತು ಅವರುಗಳು ಒಳಗೆ ಪ್ರವೇಶ ಮಾಡಲು ಸಾಧ್ಯವಿರಲಿಲ್ಲ. ಅವರು ಬಾಗಿಲಿನ ಬಳಿಯಲ್ಲಿ ನಿಂತುಕೊಂಡು; "ಪೇತ್ರನೆನಿಸಿಕೊಳ್ಳುವ ಸೀಮೋನನು ಇಲ್ಲಿ ಇಳುಕೊಂಡಿದ್ದಾನೋ ಎಂದು ಕೂಗಿ ಕೇಳಿದರು" (10:18).

ಪೇತ್ರನು ಮೇಲ್ಚಾವಣಿಯಲ್ಲಿದ್ದುಕೊಂಡು, "ಆ ದರ್ಶನದ ಬಗ್ಗೆ ಮೆಲಕು ಹಾಕುತ್ತಿದ್ದನು," "ದೇವರ ಆತ್ಮನು ಅವನೊಂದಿಗೆ ಮತನಾಡಿ,[52] ಆಗೋ ಇಬ್ಬರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ, ನೀನೆದ್ದು ಕೆಳಗಿಳಿದು ಏನೂ ಸಂಶಯಪಡದೆ ಅವರ ಜೊತೆಯಲ್ಲಿ ಹೋಗು, ನಾನೇ ಅವರನ್ನು ಕಳುಹಿಸಿದ್ದೇನೆ ಅಂದನು" (10:19, 20) ಆ ರಹಸ್ಯವು ಪೇತ್ರನ ಮನಸ್ಸಿನಲ್ಲಿ ಆಳವಾದ ಪರಿಣಾಮವನ್ನು ಹೊಂದಿತ್ತು. ಪೇತ್ರನು ಕೆಳಗಿಳಿದು ಆ ಮನುಷ್ಯರ ಬಳಿಗೆ ಬಂದು "ಇಗೋ, ನೀವು ವಿಚಾರಿಸುವವನು ನಾನೇ; ನೀವು ಬಂದ ಕಾರಣವೇನು ಎಂದು ಕೇಳಿದನು?" (10:21) ಈಗ ಪೇತ್ರನಿಗೆ ಪರಲೋಕದ ದರ್ಶನ ಮತ್ತು ದೇವದೂತನು ಈ ಮನುಷ್ಯರನ್ನು ಸಂಧಿಸಲು ತಿಳಿಸಿದ ವಿಷಯಗಳ ನಡುವೆ ಗೊಂದಲವುಂಟಾಯಿತು.

ಆ ಮನುಷ್ಯರು ಅವನಿಗೆ - "ಕೊರ್ನೇಲ್ಯನೆಂಬ ಒಬ್ಬ ಶತಾಧಿಪತಿ ಇದ್ದಾನೆ, ಅವನು ನೀತಿವಂತನು ದೇವರಿಗೆ ಭಯಪಡುವವನು ಯೆಹೂದ್ಯ ಜನರೆಲ್ಲರಿಂದ ಒಳ್ಳೆಯ ಹೆಸರನ್ನು ಹೊಂದಿದವನೂ ಆಗಿದ್ದಾನೆ, ನಿನ್ನನ್ನು ತನ್ನ ಮನೆಗೆ ಕರೆಕಳುಹಿಸಿಕೊಂಡು ನಿನ್ನಿಂದ ಬೋಧನೆಯನ್ನು ಕೇಳಬೇಕೆಂದು ದೇವದೂತನ ಮುಖಾಂತರವಾಗಿ ಅಪ್ಪಣೆ ಹೊಂದಿದನು ಎಂದು ಹೇಳಿದನು" (10:22) ಅದರಲ್ಲಿದ್ದ ಪ್ರಮುಖವಾದ ಪದಗಳನ್ನು ಪೇತ್ರನು ಗಮನಿಸಿದನು: "ಶತಾಧಿಪತಿ ... ಭಯ ಭಕ್ತಿವುಳ್ಳವನು" ಯೆಹೂದ್ಯರಲ್ಲಿ ವರ್ಚಸ್ಸನ್ನು ಹೊಂದಿದವನು. ಆ ಮನುಷ್ಯರನ್ನು ಕಳುಹಿಸಿದವನು ಒಬ್ಬ ಅನ್ಯನು ಎಂದು ಪೇತ್ರನು ಅರಿತನು! ಒಬ್ಬ ಅನ್ಯನು ಅವನಿಂದ ಸುವಾರ್ತೆಯನ್ನು ಕೇಳಲು ದೇವರು ಯೋಜಿಸಿದ್ದನು! ಕೆಲವು ಆಲೋಚನೆಗಳು ಪೇತ್ರನ ಮನಸ್ಸಿನಲ್ಲಿ ಉದ್ಭವಿಸಿದವು. ಅವನ ಆಹಾರದ ಅಭ್ಯಾಸವನ್ನು ಬದಲಿಸಿಕೊಳ್ಳುವದಕ್ಕಾಗಿ, ಅವನು ದರ್ಶನವನ್ನು ಪಡೆದಿರಲಿಲ್ಲವೆಂದು ಅರಿತನು.

ಈ ಸನ್ನಿವೇಶದಲ್ಲಿ ಪೇತ್ರನು ತನ್ನ ದರ್ಶನದ ಮುಖ್ಯ ತಾತ್ಪರ್ಯವನ್ನು ಗ್ರಹಿಸಿಕೊಂಡನೇ? ಎಂಬುದನ್ನು ನಾನರಿಯೆನು, ಆದರೆ ಮುಂದಿನ ವಚನ ಅದ್ಭುತವಾದದ್ದು: "ಪೇತ್ರನು ಇದನ್ನು ಕೇಳಿ ಅವರನ್ನು ಒಳಕ್ಕೆ ಕರೆದು ಉಪಚರಿಸಿದನು" (10:23ಎ).[53] ಅದು ಪೇತ್ರನ ಸ್ವಂತ ಮನೆ ಆಗಿಲ್ಲದಿದ್ದರೂ, ಪೇತ್ರನು ಅವರನ್ನು ಒಳಕರೆದನು. (ಒಂದು ವೇಳೆ ಚರ್ಮಕಾರನು "ನನ್ನ ಮನೆ ನಿನ್ನದೇ" ಎಂದು ಹೇಳಿರಬಹುದು) ಆದರೆ ಅದು ಆಹ್ವಾನದ ಪ್ರಮುಖ ಅಂಶವಲ್ಲ. ಬಹಳ ಪ್ರಮುಖವಾದ (ದಿಗ್ಭ್ರಮೆ ಪಡಿಸುವ) ಅಂಶವೇನೆಂದರೆ, ಒಬ್ಬ ಯೆಹೊದ್ಯನು, ಒಬ್ಬ ಅನ್ಯನನ್ನು ಆಹ್ವಾನ ಮಾಡಿದ್ದನು.[54] ಮತ್ತು ಉಪಚರಿಸಿ ಅವನನ್ನು ರಾತ್ರಿಯೆಲ್ಲಾ ತನ್ನಲ್ಲಿಯೇ ಇರಿಸಿಕೊಂಡಿದ್ದನು! ಯೆಹೂದ್ಯನು, ಅನ್ಯನ ಮನೆಗೆ ಹೋದ ವಿಷಯಕ್ಕಿಂತಲೂ, ಸರಳವಾದ ವಿಷಯವಾಗಿತ್ತು; ಹೇಗೂ, ಯೆಹೂದ್ಯರ ಮತ್ತು ಅನ್ಯರ ನಡುವಿನ ಗೋಡೆಯನ್ನು ಕೆಡವಿ ಹಾಕುವ ಮುಖ್ಯಾಂಶವಾಗಿತ್ತು. ಗೌರವವೆಂದು ತಿಳಿದ ಗೋಡೆಯ ನಡುವೆ ಒಂದು ಬಿರುಕು ಉಂಟಾಗಿತ್ತು!

ಇಲ್ಲಿರುವ ಸರಳವಾದ ಪ್ರಶ್ನೆ ಏನೆಂದರೆ, ಆ ಮನುಷ್ಯರ ಸಂಗಡ ಪೇತ್ರನು, ತಟ್ಟನೆ ಎದ್ದು ಕೈಸರೈಯಕ್ಕೆ ಏಕೆ ಹೋದನು? ವಿವರಣೆಕಾರರ ವಿವರಣೆಯಂತೆ, *ಅವರು ಹಿಂದಿನ "ದಿವಸ ತಡವಾಗಿ ಬಂದಿದ್ದರು*, ಮತ್ತು ಪೇತ್ರನು ಅವರನ್ನು ರಾತ್ರಿಯಲ್ಲಿ ತನ್ನ ಸಂಗಡ ಉಳಿಸಿಕೊಂಡಿದ್ದನು." ಕೊರ್ನೇಲ್ಯನ ಮನುಷ್ಯರು ಸಾಯಂಕಾಲ 4:00 ಗಂಟೆಗೆ,

ಯೊಪ್ಪದಿಂದ ತೆರಳಿ ರಾತ್ರಿ 1:00 ಗಂಟೆಯ ಸಮಯಕ್ಕೆ ಪೇತ್ರನನ್ನು ಸಂಧಿಸಿದ್ದರು. ತಡವಾದದಕ್ಕೆ ಹಲವಾರು ಕಾರಣಗಳಿರಬಹುದು: ಪೇತ್ರನು ಮತ್ತು ಅವನ ಸಂಗಡವಿದ್ದ[55] ಆರು ಜನರು, ಬಹುಶಃ ಯೌವನಸ್ಥರಾಗಿರದೇ ಇರಬಹುದು, ಮತ್ತು ರಾತ್ರಿಯೆಲ್ಲಾ - ಎಚ್ಚರವಿರಲು ಸಾದ್ಯವಿಲ್ಲದೆ ಇರಬಹುದು.[56] ಮತ್ತು ಆ ಮೂವರು ಜನರಿಗೆ ವಿಶ್ರಾಂತಿಯ ಅವಶ್ಯವಿದ್ದಿರಬಹುದು. ಪೇತ್ರನು, ಅವರ ಮುಖದಲ್ಲಿದ್ದ ಆಯಾಸವನ್ನು ಗಮನಿಸಿ, "ಅವರನ್ನು ಒಳಗೆ ಕರೆದು ಉಪಚರಿಸಿರಬಹುದು. ವಿಶ್ರಾಂತಿಯ ನಂತರ ಪ್ರಯಾಣವನ್ನು ಮುಂದುವರಿಸೋಣ ಎಂದು ಹೇಳಿರಬಹುದು!" ಅಥವಾ ಯೆಹೂದ್ಯರ ನಿಯಮದಂತೆ ಆರು ಜನರ ಸಾಕ್ಷಿಯು ಯೆರುಸಲೇಮಿನವರಿಗೆ ದೃಢಪಡಿಸುವಂತದ್ದಾಗದ್ದರಿಂದ, ಅವರನ್ನು ಒಟ್ಟುಗೂಡಿಸಲು, ಸಾಕಷ್ಟು ಸಮಯವನ್ನು ಪಡೆದಿರಲೂ ಬಹುದು.[57]

ಪ್ರಸಂಗಿಯು ಸಿದ್ಧನಾಗಿದ್ದರೂ, ಇತರೆ ಯೆಹೂದ್ಯ ಕ್ರೈಸ್ತರಲ್ಲಿ ದೇವರು ತನ್ನ ಕಾರ್ಯವನ್ನು ನಡೆಸಬೇಕಿತ್ತು.

## ದೇವರ ಮೂರನೆಯ ಹೆಜ್ಜೆ: ಸಭೆಯನ್ನು ಸಿದ್ಧಪಡಿಸಿರಿ (10:23-48; 11:12-17)

ಉಳಿದಿದ್ದ ಯೆಹೂದ್ಯ ಕ್ರೈಸ್ತರನ್ನು ಸಿದ್ಧಪಡಿಸಲು, ಒಂದು "ದೊಡ್ಡ ಹೆಜ್ಜೆಯಲ್ಲಿ" ಅನೇಕ "ಚಿಕ್ಕ ಹೆಜ್ಜೆಗಳ" ಅಗತ್ಯತೆ ಇತ್ತು. ಪೇತ್ರನೊಂದಿಗೆ ಪ್ರಯಾಣ ಬೆಳೆಸಲು ಕೆಲವು ಯೆಹೂದ್ಯ ಕ್ರೈಸ್ತರನ್ನು ಮನವರಿಕೆ ಪಡಿಸಬೇಕಿತ್ತು. ಅನ್ಯರ ಸಂಗಡ, ಅನ್ಯ ದೇಶಕ್ಕೆ ಪ್ರಯಾಣಮಾಡುವದು, ಯೆಹೂದ್ಯರಿಗೆ ನಿಷೇದಪಡಿಸಲಾಗಿತ್ತು. ಪೇತ್ರನು ಅವರಿಗೆ ತನ್ನ ದರ್ಶನವನ್ನು ವಿವರಿಸಿ, ಅವನೊಂದಿಗೆ ಪ್ರಯಾಣ ಮಾಡಲು ಸ್ಪೂರ್ತಿನೀಡಿರಬಹುದು. ಅವನು ಅದನ್ನು ಹೇಳುವಾಗ, ಅವರು ಅವನಿಗೆ ಗೌರವವನ್ನು ನೀಡರಬಹದು. ಅವರ ಮನೋಭಾವನೆಗಳು ಏನೇ ಇರಬಹುದು, ಕೆಲವರು ಅವನೊಂದಿಗೆ ಹೋಗಲು ಸಿದ್ಧರಾಗಿದ್ದರು. "ಮರುದಿನ ಅವನು ಎದ್ದು ಅವರ ಜೊತೆಯಲ್ಲಿ ಹೊರಟನು; *ಯೊಪ್ಪದಲ್ಲಿದ್ದ ಸಹೋದರರಲ್ಲಿ ಕೆಲವರು ಅವನಕೂಡ ಹೋದರು*" (10:23ಬಿ; ಒತ್ತಿ ಹೇಳಿದ್ದು ನನ್ನದು). ಅಧ್ಯಾಯ 11ರಲ್ಲಿ ಆರು ಜನ ಸಹೋದರರು ಪೇತ್ರನ ಸಂಗಡ ಹೋದರು ಎಂದು ಕಲಿಯುತ್ತೇವೆ (11:12). ಈ ಮನುಷ್ಯರು ತಕ್ಷಣವೇ ಯೊಪ್ಪಕ್ಕೆ ಹಿಂದಿರುಗದೇ, ಪೇತ್ರನ ಸಂಗಡ ಯೆರುಸಲೇಮಿಗೆ ಹೋದರು (11:12), ಮುಂದೆ ನಡೆಯುವಂತ ಕಾರ್ಯಕ್ಕೆ ಸಾಕ್ಷಿಯಗುವಂತೆ, ಪೇತ್ರನು ಅವರನ್ನು ತನ್ನ ಸಂಗಡ ಕರೆದುಕೊಂಡು ಹೋದನು.[58] ಧರ್ಮಶಾಸ್ತ್ರದಲ್ಲಿ ತಿಳಿಸಿರುವಂತೆ ಯಾವುದೇ ವಿಷಯಗಳನ್ನು ಎರಡು ಅಥವಾ ಮೂರು ಸಾಕ್ಷಿಗಳ ಮೂಲಕ ದೃಢೀಕರಿಸಬೇಕು (ಧರ್ಮೋಪದೇಶಕಾಂಡ 17:6); ಪೇತ್ರನು ಇದಕ್ಕೆ ಹೆಚ್ಚಾದ ಜನರನ್ನು ಸೇರಿಸಿದನು.[59]

ಆ ದಿನ ಹತ್ತು ಜನರು ಒಟ್ಟಾಗಿ, ಮೂವತ್ತು ಮೈಲಿಗಳ ಅಂತರದಲ್ಲಿದ್ದ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದರು: ಅವರಲ್ಲಿ ಮೂರು ಜನ ಕೊರ್ನೇಲ್ಯನ ಮನುಷ್ಯರು ಪೇತ್ರನು, ಮತ್ತು ಆರು ಜನ ಯೆಹೂದ್ಯ ಸಹೋದರರು ಈ ಎರಡು ದಿನಗಳ ಅಂತರದಲ್ಲಿ, ಗೋಡೆಯ ಮಧ್ಯದಲ್ಲಿದ ಬಿರುಕು ಇನ್ನು ದೊಡ್ಡದಾಗಿತ್ತು. ಆ ಪ್ರಯಾಣದ ಮೊದಲು, ಪೇತ್ರ ಮತ್ತು ಅವನ ಆರು ಜನ ಸಹಚರರು ಯಾವುದೇ ವಿಧವಾದ ಸಂಭಾಷಣೆಯನ್ನು ಆ ಅನ್ಯ ಜನರೊಂದಿಗೆ ಮಾಡಿರಲಿಲ್ಲ - ಒಂದು ತನವು ಅಪಾರ್ಥವನ್ನು ಅಧಿಕಮಾಡುತ್ತದೆ, ಅನ್ಯೋನ್ಯತೆಯು ತಿಳುವಳಿಕೆಯನ್ನು ವೃದ್ಧಿ ಮಾಡುತ್ತದೆ. ಪೇತ್ರನು, ಕೊರ್ನೇಲ್ಯನ ಕುರಿತು ವಿಚಾರಿಸಿರಬಹುದು, ಅವನಲ್ಲೂ ಮತ್ತು ಅವನ ಕುಟುಂಬದಲ್ಲೂ ಅವರು ಹೊಂದಿದ್ದ ಯೇಸುವಿನ ಕುರಿತಾದ ತಿಳುವಳಿಕೆಯ ಬಗ್ಗೆಯೂ ವಿಚಾರಿಸಿರಬಹುದು, ಅವನು ಮುಂದೆ ಹೇಳು ವದಕ್ಕಿದ್ದ ಸಂದೇಶದ ಮುನ್ನುಡಿಯನ್ನು ಅವರಿಗೆ ತಿಳಸಿರಲೂ ಬಹುದು - ಹೇಗೂ ಪೇತ್ರನು ನಡೆಯುತ್ತಿರುವ ಎಲ್ಲಾ

ಘಟನಾವಳಿಗಳನ್ನು ಆಳವಾಗಿ ಯೋಚಿಸುತ್ತಿರಬಹುದು.

ವಚನ 24ರಲ್ಲಿ, "ಮರುದಿನ ಅವನು ಕೈಸರೆಯಕ್ಕೆ ಸೇರಿದನು." ಕೈಸರೆಯಲ್ಲಿ ಪೇತ್ರನಿಗೂ ಮತ್ತು ಅವನ ಸಹಚರರಿಗೂ ಆಶ್ಚರ್ಯರ್ವವು ಕಾದಿತ್ತು - ಮುಂದಿನ "ಹೆಜ್ಜೆಯು," ಯೆಹೂದ್ಯರ ಮತ್ತು ಅನ್ಯರ ನಡುವಿನ ಅಡ್ಡ ಗೋಡೆಯನ್ನು ಕೆಡವಿ ಹಾಕುವ ಸಂದರ್ಭವಾಗಿತ್ತು. ಮುಂದಿನ ಪಾಠದಲ್ಲಿ ಕಥೆಯನ್ನು ಮುಂದುವರಿಸಲಾಗುವದು.

## ಮುಕ್ತಾಯ

ಅಪೊಸ್ತಲರಕೃತ್ಯಗಳು 10ರ ಮೊದಲ ಭಾಗವನ್ನು ನಾವು ಕಲಿಯುವಾಗ, ಅಡ್ಡಗೋಡೆಯನ್ನು ದೇವರು ಕೆಡವಿ ಹಾಕಿದ ವಿಧವು ನಮ್ಮ ಹೃದಯಗಳಲ್ಲಿ ಪ್ರಭಾವವನ್ನು ನೀಡಿತು ಎಂದು ನಾನು ಭಾವಿಸಿರುವೆನು. ಯೆಹೂದ್ಯರ ಆಶೀರ್ವಾದಗಳನ್ನು ಹೊಂದದೆ ಇರುವ ನಮಗೆ ಈ ವಚನಗಳು ವಿಶೇಷವಾಗಿ ಮಾತನಾಡುತ್ತವೆ. ಎರಡನೆಯ ಮಹಾಯುದ್ಧದ ಸಮಯದಲ್ಲಿ ನಾನು ಚಿಕ್ಕವನಾದ್ದರೂ, ಅಂಕಲ್ ಸ್ಯಾಮ್‌ರವರು ತಮ್ಮ ತೋರು ಬೆರಳನ್ನು ತೋರಿಸುತ್ತಾ, "ನನಗೆ *ನಿನ್ನ* ಅವಶ್ಯವಿದೆ"[60] ಎಂದು ತಿಳಿಸುತ್ತಿದ್ದ ಚಿತ್ರಪಟವನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. ದೇವರು ಸಹ ಅಪೊಸ್ತಲರಕೃತ್ಯಗಳು 10ರಲ್ಲಿ ಯೆಹೂದ್ಯರಲ್ಲದ ನಮ್ಮ ಕಡೆಗೆ ಬೆರಳನ್ನು ತೋರಿಸುತ್ತಾ, "ನನಗೆ ನಿನ್ನ ಅಗತ್ಯವಿದೆ" ಎಂದು ಹೇಳುವವನಾಗಿರುವನು. ಈ ದಿನದಲ್ಲಿರುವ ಸಕಲ ವಿಧವಾದ ಅನ್ಯರ ಪರಿವರ್ತನೆಗೆ ಕೊರ್ನೇಲ್ಯನು ಮತ್ತು ಅವನ ಮನೆಯವರೇ ಮೂಲ ಪಿತೃಗಳಾಗಿರುವರು!

ಕೊರ್ನೇಲ್ಯನಂತೆ ಭಯ ಭಕ್ತಿಯುಳ್ಳವರಾಗಿದ್ದರೂ, ನಶಿಸಿ ಹೋದಂತಿರುವ ನಮ್ಮೊಂದಿಗೆ ಈ ಕಥೆಯು ಮಾತನಾಡುತ್ತದೆ. ನಿಮ್ಮ ಒಳ್ಳೇತನದ ಮೇಲೆ ಅವಲಂಭಿಸಲು ಅಸಾಧ್ಯ; ನೀವು ದೇವರಲ್ಲೂ ಮತ್ತು ಆತನ ಕೃಪೆಯಲ್ಲೂ ಅವಲಂಭಿಸಬೇಕು!

ಹೆಮ್ಮೆ ಪಡುವವರೊಂದಿಗೂ ಈ ವಾಕ್ಯವು ಮಾತನಾಡಿರುತ್ತದೆ ಎಂದು ನಾನು ನಂಬುತ್ತೇನೆ. ವಿಲಿಯಂ ಹ್ಯಾಸ್‌ಲಿಟ್‌ರವರು ಪಕ್ಷಪಾತವನ್ನು "ಅಲಕ್ಷದ ಮಗು" ಎಂದು ಕರೆದಿರುವರು.[61] ಓಲ್ಟೇರವರು ಪಕ್ಷಪಾತವನ್ನು "ಮೂರ್ಖರು ಪ್ರಾಯೋಜಿಸುವ ಕಾರಣ" ಎಂದು ಹೇಳಿರುವರು.[62] ಯಾಕೋಬನು ಬರೆದು "ನನ್ನ ಸಹೋದರರೇ ಪ್ರಭಾವವುಳ್ಳ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಪಕ್ಷಪಾತಿಗಳಾಗಿರಬಾರದು" ಎಂದು ಹೇಳಿರುವರು (ಯಾಕೋಬ 2:1). ನಮ್ಮನ್ನು ಪರೀಕ್ಷಿಸಿಕೊಳ್ಳುವದಾದರೆ, ಒಂದು ಕಾಲದಲ್ಲಿ ನಾವು ಸಹ ಪಕ್ಷಪಾತಿಗಳಾಗಿದ್ದವರು ಎಂದು ತಿಳಿಯಬೇಕು. ನಾವು ಪ್ರತಿಯೊಬ್ಬರು ಪಕ್ಷಪಾತದ ಪಟ್ಟಿಯನ್ನು ತೆಗೆದು ಅದರ ಕುರಿತು ತೀರ್ಮಾನವನ್ನು ತೆಗೆದುಕೊಳ್ಳಬೇಕು - ಅದಕ್ಕೆ ದೇವರ ಸಹಾಯವನ್ನು ಪಡೆಯಬೇಕು!

ದೇವರ ವಾಕ್ಯವು ನಮ್ಮ ಹೃದಯಗಳಿಗೆ ಮಾತನಾಡುವಾಗ, ನಮ್ಮ ಹೃದಯಗಳಲ್ಲಿ ಬದಲಾವಣೆಯನ್ನು ತಂದು ಕೊಳ್ಳಬೇಕು. ಅದು ಯಾವುದೇ ಬದಲಾವಣೆಗಳಿರಬಹುದು. ನೀನು ಅದನ್ನು ಬದಲಿಸಿಕೊಳ್ಳುವಂತೆ ನಾನು ಬೇಡಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಪೇತ್ರನಂತೆ "ಇಲ್ಲ" ಎಂಬುದಾಗಿ ಹೇಳಬಾರದು. ದೇವರ ಆ ದೇಶಕ್ಕೆ ಕರ್ತನೇ, *ಹೌದು* ಎಂಬುದಾಗಿ ಹೇಳುವದೇ ನಿಮ್ಮ ಪ್ರತಿಕ್ರಿಯೆಯಾಗಿರಲಿ.

---

ಟಿಪ್ಪಣಿಗಳು

[1]ಎಫೆಸ 1:22, 23. [2]ಅನ್ಯರು ಯೆಹೂದ್ಯರಿಂದ ಮತಾಂತರಗೊಂಡವರು. [3]ಮತ್ತಾಯ, ಮಾರ್ಕ, ಯೋಹಾನ ಸುವಾರ್ತೆಗಳಲ್ಲಿ ಕ್ರೂಜಿತ ವಿಷಯವನ್ನು ನೋಡುತ್ತೇವೆ. [4]"ಅನ್ಯರನ್ನು ನಾಯಿಗಳು"

ಎನ್ನುತ್ತಿದರು. ಒಬ್ಬ ಯೆಹೂದಿಯು ಪಟ್ಟಣದಿಂದ ಮನೆಗೆ ಹಿಂದಿರುಗುವಾಗ, ಬೋಜನದ ಮೊದಲು ಮೊಣಕೈಯವರಿಗೂ ನೀರಿನಿಂದ ತೊಳಕೊಳ್ಳಬೇಕಿತ್ತು (ಮತ್ತಾಯ 15:2). ಒಂದು ವೇಳೆ ಅನ್ಯನನ್ನು ಮುಟ್ಟಿದ್ದರೆ ಈ ಕಾರ್ಯದಿಂದ ಶುದ್ಧನಾಗುತ್ತಿದ್ದನು. [5]ರೋಮಾಯ ಅಧಿಕಾರಿಗಳು (ರಾಜ್ಯಪಾಲರು) ವಿಶೇಷ ಸಂದರ್ಭಗಳಲ್ಲಿ ಯೆರುಸಲೇಮಿಗೆ ಹೋಗುತ್ತಿದ್ದರು (ಆದ್ದರಿಂದ ಪಿಲಾತನು ಪಸ್ಕದ ಸಮಯದಲ್ಲಿ ಯೆರುಸಲೇಮಿಗೆ ಹೋದನು), ಕೈಸರೆಯು ಅವರಿಗೆ ವಾಸಸ್ಥಳವಾಗಿತ್ತು. [6]ದಂಡು ಎಂದರೆ (ಆರು ಸಾವಿರ ಜನ) ಅಥವಾ 600 ಜನ. [7]ಸ್ಥಳೀಯರು ಅಲ್ಲಿ ನೆಲಸಿದ್ದರು. ಇತಾಲ್ಯದವರು ಕೆಲವು ಸಮಯ ಅಲ್ಲಿ ತಂಗೀರಬಹುದು. [8]"ಕೊರ್ನೇಲ್ಯನು" ಎಂಬುದು ಲ್ಯಾಟಿನ ಭಾಷೆಯ ಸಾಮಾನ್ಯ ಹೆಸರು. ಅನೇಕ ವರ್ಷಗಳ ನಂತರ, ಕೊರ್ನೇಲ್ಯ ಸುಲ್ಲಾ ಎಂಬುವನು 10,000 ಗುಲಾಮರನ್ನು ಬಿಡುಗಡೆ ಮಾಡಿದ್ದನು, ಅನೇಕರು ಆ ಹೆಸರನ್ನು ಹೊಂದಿದ್ದರು. [9]ಹೊಸ ಒಡಂಬಡಿಕೆಯಲ್ಲಿ ಶತಾಧಿಪತಿಯೆಂಬ ಅನೇಕ ಹೆಸರನ್ನು ನೋಡುತ್ತೇವೆ. ಅವರನ್ನು ಒಳ್ಳೇಯ ಮಾದರಿಯನ್ನಾಗಿ ಬಿಂಬಿಸಲಾಗಿದೆ. ಅವರು ರೋಮಾ ಸೈನ್ಯದ ಬೆನ್ನೆಲುಬಾಗಿದ್ದರು. [10]"ಭಯಭಕ್ತಿ" ಎಂಬುದಕ್ಕೆ ಸಮೀಪರಾದ "ಅನ್ಯರು" ಮತ್ತು "ಯೆಹೂದ್ಯಲಿಂದ ಮತಾಂತರಗೊಂಡವರು" "ದೇವರಿಗೆ ಭಯಪಡುವವರು" ಎಂಬ ವಿವರಣೆಯನ್ನು ಪಂಡಿತರು ನೀಡಿರುವರು.

[11]11:3ರಲ್ಲಿ ಸುನ್ನತಿಯಿಲ್ಲದವನು ಎಂದು ತಿಳಿಸಲಾಗಿದೆ. [12]ಅಪೊಸ್ತಲರಕೃತ್ಯಗಳು 10:30, "ಪಶ್ಚಿಮಾತ್ಯ ವಾಕ್ಯದಲ್ಲಿ" "ಉಪವಾಸ" ಎಂದು ಸೇರಿಸಲಾಗಿದೆ (KJV) ಪಾಶ್ಚಿಮಾತ್ಯ ವಾಕ್ಯ 2ನೇ ಶತಮಾನದಿಂದ 4ನೇ ಶತಮಾನದವರೆಗೂ ಇದ್ದ ಗ್ರಂಥಗಳಿಗೆ ಈ ಹೆಸರನ್ನು ನೀಡಲಾಗಿದೆ. ಇದಕ್ಕೆ ಅನೇಕ ಆಸಕ್ತಿಕರವಾದ ಬರವಣಿಗೆಯನ್ನು ಸೇರಿಸಿದ್ದರೂ ಅದು ಪ್ರೇರಿತವಾದದ್ದಲ್ಲ. [13]3:1ರ ಟಿಪ್ಪಣಿಯಂತೆ. [14]ಯೆಹೂದ್ಯರು ಮುಂಜಾನೆಯಿಂದ ಸಮಯದ ಲೆಕ್ಕವನ್ನು ಪ್ರಾರಂಭಿಸುತ್ತಿದ್ದರು, 9ನೇ ತಾಸು ಎಂದರೆ ಮಧ್ಯಾಹ್ನ 3 ಘಂಟೆ. [15]ಸ್ಪಷ್ಟವಾಗಿ ನೋಡಿದನು ಎಂಬುದು ಊಹೆರಹಿತವಾಗಿದೆ. NIVಯಲ್ಲಿ "ಅವನು ದೇವದೂತನನ್ನು ನೋಡಿದನು." [16]ಅಕ್ಷರಶ ಭಯಭೀತನಾಗಿದ್ದನು (KJV) ಸತ್ಯವೇದದಲ್ಲಿ ದೈವಿಕ ಮುಖಾಮುಖಿಯು ಭಯಪಡುವ ಸಾಮಾನ್ಯವಾದ ಪ್ರತಿಕ್ರಿಯೆಯನ್ನು ಹೊಂದಿತ್ತು. [17]ಈ ಹಿನ್ನಲೆಯಲ್ಲಿ "ಕರ್ತನು" ಎಂಬ ಗೌರವಪೂರ್ವಕ ಪದವನ್ನು ಬಳಸಲಾಗಿದೆ. [18]ಊಹೆಯ ಯಜ್ಞದ ಕುರಿತು ದೇವದೂತರು 2 ಸಲಹೆಯನ್ನು ನೀಡಿರುವರು: (1) ಯಜ್ಞ ಹೋಮವೆಂದರೆ "ಇಳಿಯುವದು" ಎಂಬರ್ಥ (2) "ಕಾಣಿಕೆಯ ಒಂದು ಭಾಗವನ್ನು ವೇದಿಯ ಮೇಲೆ ಸುಡುವದು" "ನೆನಪಿನ ಕಾಣಿಕೆ" (ಯಾಜಕಕಾಂಡ 2:2, 9, 16, 5:12). NIVಯಲ್ಲಿ ನೆನಪಿನ ಯಜ್ಞ ಎಂಬುದಾಗಿದೆ 10:4. [19]ಗುಣವಾದಂತನ ಮಾತುಗಳು ಸ್ಫೂರ್ತಿಯನ್ನು ನೀಡಲಿಲ್ಲ. ಅದು ಹಳೇ ಒಡಂಬಡಿಕೆಯ ಸತ್ಯವನ್ನು ಆಧಾರಗೊಂಡಿತ್ತು (ಜ್ಞಾನೋಕ್ತಿ 28:9). ಪಾಪ ಮಾಡಿದ ದೇವರ ಮಗುವಿನ ಕುರಿತಾಗಿ ಬರೆಯಲ್ಪಟ್ಟಿದೆ ವಿನ ಅನ್ಯ ಪಾಪಿಯ ಕುರಿತಾಗಿರುವದಿಲ್ಲ. [20]ದೇವದೂತನ ದರ್ಶನ ಕೊರ್ನೇಲ್ಯನ ಪ್ರಾರ್ಥನೆಗೆ ಉತ್ತರವಾಗಿದ್ದು, ಕೊರ್ನೇಲ್ಯನು ಮುಂದಿನ ಮಾರ್ಗದರ್ಶನಕ್ಕಾಗಿ ಬೇಡಿಕೊಳ್ಳುತ್ತಿದ್ದನು.

[21]"ಕೇಳು" ಎಂಬುದು "ಪ್ರತಿಕ್ರಿಯೆಯ" ಗುರುತು. [22]22:16, ಪ್ರಾರ್ಥಿಸುವವನಿಗೆ ಪ್ರಸಂಗಿಯು "ತಡವೇಕೆ? ಎದ್ದು, ದೀಕ್ಷಾಸ್ನಾನ ಮಾಡಿಸಿಕೋ, ಮತ್ತು ನಿನ್ನ ಪಾಪಗಳನ್ನು ಆತನ ಹೆಸರಲ್ಲಿ ತೊಳೆದುಕೋ." [23]KJV ಯ ವಚನ 6ರ ಅಂತ್ಯವನ್ನು: "ನೀನು ಮಾಡಬೇಕಾದದ್ದನ್ನು ನಿನಗೆ ತಿಳಿಸಲ್ಪಡುವದು. ಮೂಲ ಬರವಣಿಗೆಯಲ್ಲಿ ಈ ಪದಗಳು ಇಲ್ಲದಿರಬಹುದು, 10:22 ಮತ್ತು 11:14ರಲ್ಲಿ ಗಮನಿಸಿ. [24]"ಪದಗಳ" ಗ್ರೀಕ್ ತರ್ಜುಮೆಯು "ಸಾಮಾನ್ಯ ಪದಗಳಾಗಿರುವದಿಲ್ಲ" ಆದರೆ "ರೆಹಮತ" ಎಂದರೆ ಮಾತಾಡಿದ ಪದ. [25]ಯೇಸುವಿನ ಮರಣದ ಮತ್ತು ಸುವಾರ್ತೆಯನ್ನು ಪ್ರಸಂಗಿಸಿದ ನಡುವಿನ ಸಮಯದಲ್ಲಿ ಜನರು ರಕ್ಷಿಸಲ್ಪಟ್ಟ ಕುರಿತು ಸಂಶಯವಿದೆ. ಆದುದರಿಂದ ಕೊರ್ನೇಲ್ಯನು ಮತ್ತು ಅವನ ಮನೆಯವರು ರಕ್ಷಿಸಲ್ಪಟ್ಟಿರುವದಿಲ್ಲ ಎಂಬ ದೇವರ ಹೇಳಿಕೆಯು ಸತ್ಯವಾದದ್ದೆ. [26]ಕೊರ್ನೇಲ್ಯನ ಮತ್ತು ಅವನ ಮನೆಯವರ ಎಫೆಸ 2:12ರ ವಿವರಣೆ ವಿಶಿಷ್ಟವಾಗಿದೆ. [27]ಆ ಇಬ್ಬರು ಸೇವಕರನ್ನು ಸಂರಕ್ಷಿಸಲು ಸೈನಿಕರನ್ನು ಕಳುಹಿಸಿರಬಹುದು. ಅವನು ಭಕ್ತಿವಂತನೆಂಬುದು ದೇವರಿಗೆ ಭಯಪಡುವವನು ಮತ್ತು ವರ್ಚಸ್ಸನ್ನು ಹೊಂದಿದವನು ಎಂಬ ಸೂಚನೆಯಾಗಿದೆ. [28]ಕಾಲ್ನಡಿಗೆಯಲ್ಲಿ ಕುದುರೆಯ ಮೇಲೆ ಅವರು ಪಯಣಮಾಡಿರುವದನ್ನು ಅರಿತಿರುವದಿಲ್ಲ. [29]ಈ ಅದ್ಭುತಗಳ ಮೂಲಕ ಪ್ರಸಂಗಿಗಳು ಮತ್ತು ಪಾಪಿಗಳು ಒಗ್ಗೂಡುತ್ತಿದ್ದರು. ಪೌಲನ ಕುರಿತು ಯೇಸು ಅವನಿಗೆ ಕಾಣಿಸಿಕೊಂಡಿದ್ದರಿಂದ ಅಪೊಸ್ತಲ ತನವನ್ನು ಹೊಂದಿದನು. [30]8:40 ಮತ್ತು 21:8-14. 8:40ರ ಪ್ರಯಾಣವು ಅಧಿಕ ಸಮಯವನ್ನು ತೆಗೆದುಕೊಂಡಿರಬಹುದು. 9:1-31 ಮೂರು ವರ್ಷಗಳ ಅಂತರವನ್ನು ಹೊಂದಿದ್ದರು (ಗಲಾತ್ಯ 1:18). ಅಪೊಸ್ತಲರಕೃತ್ಯಗಳು 10ರ ಘಟನಾವಳಿಯ ಹಿನ್ನಲೆಯಲ್ಲಿ ಫಿಲಿಪ್ಪನು ಕೈಸರೈಯನ್ನು ಸೇರಿದ್ದನು. ಅಲ್ಲಿ ಫಿಲಿಪ್ಪನು ಮನೆಯನ್ನು ಮಾಡಿಕೊಂಡಿದ್ದನು.

[31]ಕೆಲವರ ಸಲಹೆಯಂತೆ ಕೊರ್ನೇಲ್ಯ ಮತ್ತು ಅವನ ಮನೆಯವರು ಪರಿವರ್ತನೆಗೊಂಡವರಲ್ಲಿ ಮೊದಲಿಗರಲ್ಲ. ಅದು ಯೆರುಸಲೇಮಿನ ಕ್ರೈಸ್ತರಲ್ಲಿ ಗೊಂದಲವುಂಟು ಮಾಡಿತ್ತು. 15:7ರಲ್ಲಿ ಪೇತ್ರನನ್ನು ಅನ್ಯರಿಗಾಗಿ ದೇವರು ಆರಿಸಿಕೊಂಡಿದ್ದನೆಂಬ ಪದಗಳ ಅರ್ಥವಿದೆ. [32]ಯೆಹೂದ್ಯರು ಸೂರ್ಯೋದಯ ಹಾಗೂ ಸೂರ್ಯಸ್ತದ ಸಮಯವನ್ನು ನಿಗಧಿಪಡಿಸುತ್ತಿದರು. 6ನೇ ಘಳಿಗೆ ಎಂದರೆ ಮಧ್ಯಾಹ್ನ 12 ಘಂಟೆ. [33]ಪೇತ್ರನು ಮೇಲ್ಮಾವಣಿಯಲ್ಲಿ ಪ್ರಾರ್ಥಿಸುವಾಗ ಅವನು ಮೇಲ್ಮಾವಣಿಯನ್ನು ಕೈಯಲ್ಲಿ ಹಿಡಿದಿದ್ದನೆಂದು ಚಿಕ್ಕ ಮಕ್ಕಳು ತಿಳಿದಿದ್ದರು. ಅದು ಮದ್ಯದಲ್ಲಿ ಸಮಟ್ಟಾಗಿದ್ದು ಬದಿಗಳಲ್ಲಿ ಇಳಿಜಾರಾಗಿತ್ತು (ಧರ್ಮೋಪದೇಶ ಕಾಂಡ 22:8). [34]ಧೈರ್ಯಕ್ಕಾಗಿ ಅಪೊಸ್ತಲನು ಪ್ರಾರ್ಥಿಸಿದ್ದನು (4:29). [35]ವೈದ್ಯರ ಹೇಳಿಕೆಯಂತೆ "ಊಟಮಾಡು" ಎಂಬುದು ಗ್ರೀಕ್ ಹೇಳಿಕೆಯಾಗಿದೆ. ಇಲ್ಲಿ ಲೂಕನ ವೈದ್ಯ ವೃತ್ತಿಯ ಹಿನ್ನಲೆಯನ್ನು ಪ್ರತಿಬಿಂಬಿಸಲಾಗಿದೆ. [36]ಅದು ಮಧ್ಯಾಹ್ನದ ಊಟವಾಗಿದ್ದು ಚರ್ಮಕಾರನ ಮನೆಯಲ್ಲಿ ಆಹಾರವನ್ನು ಸಿದ್ಧಪಡಿಸಿದ್ದರು. ಕೆಲವು ಹಿನ್ನಲೆಯುಳ್ಳವರು ವಿವಿಧವಾದ ಊಟದ ಸಮಯವನ್ನು ಹೊಂದಿರುವರು. ಅದರೆ ವಿಶೇಷವಾದ ಆಹಾರವಾಗಿದ್ದರಿಂದ ಪೇತ್ರನು, ಹಸಿದವನಾಗಿದ್ದನು. [37]"ಏಳು" ಎಂಬ ಪದ (ವಚನ 13). [38]"ಎಕ್ಸ್‌ಟಾಸಿಸ್" ಎಂಬ ಗ್ರೀಕ್ ಪದವು "ಹೊರಗೆ" ಮತ್ತು "ಹಾಕು" ಎಂಬ ಜೋಡಿಪದವನ್ನು ಹೊಂದಿರುತ್ತದೆ. ಅಕ್ಷರಶ ಅರ್ಥ "ಬೇರೆ ಸ್ಥಳದಲ್ಲಿಡು" ಮನಸ್ಸನ್ನು ಉತ್ತಮವಾದ ಸ್ಥಳಕ್ಕೆ ತೆಗೆದುಕೊಂಡು ಹೋಗು. [39]Clarence Jordan, *The Cotton Patch Version of Luke and Acts* (Clinton, N.J.: New Win Publishing, 1969), 114. [40]ನೋಡಿರಿ 11:6.

[41]ನ್ಯೂ ಸೆಂಚುರಿ ವರ್ಷನ್. [42]ಆದಿ 6:20 ಮೀನುಗಳ ಕುರಿತು ಹೇಳಿರುವದಿಲ್ಲ, ಏಕೆಂದರೆ ಅವು ನೀರಿನಿಂದ ಹೊರಗಡೆ ಇರುವದಿಲ್ಲ. [43]"ಶುದ್ಧ" ಪ್ರಾಣಿಗಳು ಹಾಗೂ "ಅಶುದ್ಧ" ಇವುಗಳ ನಡುವಿನ ವ್ಯತ್ಯಾಸವನ್ನು ಯಾಜಕ 11:1-47, ಧರ್ಮೋಪದೇಶಕಾಂಡ 14:3-20ರಲ್ಲಿ ತಿಳಿಸಲಾಗಿದೆ. "ಶುದ್ಧ" ಎಂದರೆ 4 ಕಾಲಿನ ಪ್ರಾಣಿಗಳು ಸೀಳು ಪಾದಗಳನ್ನು ಹೊಂದಿ ಮತ್ತು ಮೆಲಕು ಹಾಕುವಂತವುಗಳು ಶುದ್ಧಾಶುದ್ಧ ಕುರಿತು ನೆಲದಲ್ಲಿ ಧರ್ಮೋಪದೇಶಕಾಂಡದಲ್ಲಿ ತಿಳಿಸಲಾಗಿದೆ. [44]ದೇವರು ಮೂರನೇಯ ವ್ಯಕ್ತಿತ್ವದಲ್ಲಿ ಮಾತನಾಡಿರುವದರಿಂದ (ವಚನ 15). ಒಂದು ವೇಳೆ ದೇವ ದೂತರು ಮಾತನಾಡಿರಬಹುದು. ಆದಾಗ್ಯೂ, ಪೇತ್ರನು ಅದನ್ನು ದೇವರ ಸಂದೇಶವೆಂದು ತಿಳಿದನು (ವಚನ 28). [45]"ಸ್ಮಾರ್-ಗಾಸ್-ಬೋರ್ಡ್" ಸ್ವೀಡಿಸ್ ಪದವಾಗಿರುತ್ತದೆ. ಊದ್ದವಾದ ಮೇಜಿನ ಮೇ ಲಿಟ್ಟರತಕ್ಕ ಆಹಾರ ಅಮೇರಿಕದಲ್ಲಿರುವಂತೆ "ಸಾಕಷ್ಟು ತಿನ್ನುವ ಆಹಾರದ ಗೃಹ." [46]"ಕೊಶೆರ್" ಎಂಬುದು ಯೆಹೂದ್ಯರು ತಿನ್ನಬಹುದಾದ ಆಹಾರ ಇಬ್ರಿಯ ಪದದಲ್ಲಿ "ಸರಿಯಾದ ಆಹಾರ." [47]ಗ್ರೀಕ್ ಭಾಷೆಯ ಅಶುದ್ಧ ಎಂಬುದು ಗ್ರೀಕ್ ಭಾಷೆಯ ಸಹಜವಾದ ಪದವಾಗಿರದೇ "ಸಾಮಾನ್ಯ ಪದವಾಗಿದೆ" (KJV). [48]1 ತಿಮೊಥೆ 4:3-5 ಆಹಾರದ ಕುರಿತು ಯೇಸು (ಮಾರ್ಕ 7:14-23) ಮುಂತಿಳಿಸಿದಂತೆ, ಯೇಸುವಿನ ಪದಗಳನ್ನು ಪೇತ್ರನು ಗ್ರಹಿಸುವಂತೆ ದೇವರು ಈ ದರ್ಶನವನ್ನು ನೀಡಿದನು. ಪೇತ್ರನ ಪ್ರಸಂಗವು ಮಾರ್ಕನ ಸುವಾರ್ತೆಯ ಸಾರಾಂಶವಾಗಿದೆ, ಮಾರ್ಕ 7:19ರಂತೆ ಎಲ್ಲಾ ಆಹಾರವು ಶುದ್ಧವಾದದ್ದೆ. [49]ಅಪೊಸ್ತಲರ ಕೃತ್ಯದಲ್ಲಿ ತಿಳಿಸಿರುವಂತೆ ದೇವರು ತನ್ನ ಸಂಪೂರ್ಣ ಚಿತ್ತವನ್ನು ತಿಳಿಸಿರುವದಿಲ್ಲ. ಅಗತ್ಯತೆಗೆ ತಕ್ಕಂತೆ, ಪ್ರಸಂಗಿಗಳು ಅದನ್ನು ಸ್ವೀಕರಿಸಲು ಸಿದ್ಧರಿರುವರೆಂದು ತಿಳಿಸಿದನು. [50]ಹೊಸ ಒಡಂಬಡಿಕೆಯಲ್ಲಿ ಇದು ದೇವರು ತಿಳಿಸುವ ವಿಧವಾಗಿದೆ: ಆತನು ಅಗತ್ಯವಾದ ಮಾಹಿತಿಯನ್ನು ನೀಡಿದರೂ, ನಾವು ಸಹ ಯೋಚಿಸಬೇಕೆಂದು ಬಯಸುತ್ತಾನೆ.

[51]ದೇವದೂತರು ಅವರಿಗೆ ಆ ಸ್ಥಳದ ವಿಷಯವಾಗಿ ಸಾಕಷ್ಟು ಮಾಹಿತಿಯನ್ನು ನೀಡಿದ್ದರು, ಆ ಅಂಶದಿಂದ, ಅವರಿಗೆ ಮಾರ್ಗದರ್ಶನ ಉಂಟಾಯಿತು. ನಮಗೆ ನಾವೇ ಮಾಡಿಕೊಳ್ಳುವ ಕಾರ್ಯಗಳು ಸಾಧ್ಯತೆಯಿರುವಾಗ ದೇವರು ಆ ಕಾರ್ಯಗಳನ್ನು ನಮಗೆ ಮಾಡುವದಿಲ್ಲ. [52]ಪೇತ್ರನು ಭ್ರಮೆ ತಪ್ಪಿದವನಾಗಿರಲಿಲ್ಲ, ಆದರೆ ಅವನ ಸಂಭಾಷಣೆಯಲ್ಲಿ ವ್ಯತ್ಯಾಸವಿತ್ತು. ದೇವದೂತರು, ಮಾತನಾಡಿದರೂ ಮತ್ತು "ಒಂದು ಸ್ವರ" ಹಾಗೂ ಪೇತ್ರನೊಂದಿಗೆ "ಪರಿಶುದ್ಧಾತ್ಮನು" ಮಾತನಾಡಿದನು ಎಂಬುದು ಖಚಿತವಾದದ್ದೆ. ಇವುಗಳ ಮೂಲಕ ದೇವರು ಮಾತನಾಡುತ್ತಿದ್ದನು (10:20, 22, 28). [53]ಸಾಮಾನ್ಯವಾಗಿ ಯೆಹೂದ್ಯರು ಅನ್ಯರನ್ನು ತಮ್ಮ ಮನೆಗೆ ಆಹ್ವಾನಿಸುತ್ತಿರಲಿಲ್ಲ, ಸತ್ಯವೇದದ ಸಮಯದಲ್ಲಿ ಅತಿಥಿ ಸಾತ್ಕಾರವು ಒಂದು ಜೀವನ ಶೈಲಿಯಾಗಿತ್ತು, ಜನರನ್ನು ಆಹಾರಕ್ಕಾಗಿ ಆಹ್ವಾನಿಸಿ ರಾತ್ರಿಯಲ್ಲಿ ತಂಗಲು ಅವಕಾಶ ಮಾಡಿಕೊಡುವದು ಸಾಮಾನ್ಯವಾದ ಆಚರಣೆಯಾಗಿತ್ತು. [54]ಸಿಮೋ ನನ ಮನೆಯಲ್ಲಿ ಒಬ್ಬನು ಆಹಾರವನ್ನು ಸಿದ್ಧಪಡಿಸುತ್ತಿದ್ದನು (10:10). ಪೇತ್ರನು ಅನ್ಯ ರೊಂದಿಗೆ ಊಟಮಾಡಿದನು. ಎಂಬುದು ಇದರಲ್ಲಿ ಒಳಗೊಂಡಿರಬಹುದು (11:3). [55]ಬಹುಶಃ ಕೊರ್ನೇಲಿಯನು ತನ್ನ ಸೇವಕರಲ್ಲಿ ಉತ್ತಮರು ಹಾಗೂ ವೇಗವುಳ್ಳವರನ್ನು ಕಳುಹಿಸಿರಬಹುದು. [56]ಕೊರ್ನೇಲಿಯನು "ನಡಿಗೆಯಲ್ಲಿ" ಉತ್ತಮರಾದವರನ್ನು ಆರಿಸಿ ಕೊಂಡಿರಬಹುದು, ಪೇತ್ರನು "ಸಾಕ್ಷಿಯಲ್ಲಿ" ಉತ್ತಮ ರಾದವರನ್ನು ಆರಿಸಿಕೊಂಡಿರಬಹುದು - ಅವರಲ್ಲಿ ಕೆಲವರು ವೃದ್ಧರಿರಬಹುದು. [57]6 ಜನರು ಯೊಪ್ಪಕ್ಕೆ

ಹಿಂದಿರುಗದೇ ಪೇತ್ರನೊಂದಿಗೆ ಯೆರುಸಲೇಮಿಗೆ ಹೋದರು (11:12). ಅವರು ಸಾಕಷ್ಟು ಸಮಯ ದೂರ ಉಳಿಯಬೇಕಾದದ್ದರಿಂದ, ಅವರ ಕೆಲಸಗಳಿಗೂ ಮತ್ತು ಅವರ ಕುಟುಂಬಗಳಿಗೂ ಕೆಲವು ಏರ್ಪಾಡುಗಳನ್ನು ಮಾಡಬೇಕಾಗಿತ್ತು. [58]ಪೇತ್ರನು ಟೀಕೆ ಉಂಟಾಗಬಹುದೆಂದು ತಿಳಿದಿದ್ದನು. ಅವನು ಮುಂದಿನದನ್ನು ಅರಿಯದೇ ಕೈಸರೈಗೆ ಹೊರಟನು. ಅಲ್ಲಿ ನಡೆಯುವಂತ ಘಟನಾವಳಿಗಳಿಗೆ ಸಾಕ್ಷಿಯನ್ನು ಹೊಂದಿದ್ದನು. [59]ಐಗುಪ್ತ ಅಥವಾ ರೋಮಾಯರಲ್ಲಿದ್ದ 7 ಸಾಕ್ಷಿಗಳ ಕುರಿತಾಗಿ ಪಂಡಿತರುಗಳು ಆಸಕ್ತಿ ವಹಿಸಿದ್ದರು. ಅಲ್ಲಿ 7 ಸಾಕ್ಷಿಗಳಾಗಿರಬೇಕೆಂದಿದ್ದರೆ (6 ಜನರು ಹಾಗೂ ಪೇತ್ರ) ಅದು ಗುರುತರವಾಗಿತ್ತು. ಅದು ಸಂಖ್ಯೆ "7" ಪ್ರಾಮುಖ್ಯತೆಯನ್ನು ತೋರುತ್ತಿತ್ತು (ಪೂರ್ಣ ಸಂಖ್ಯೆ). ಅನ್ಯರಿಗಿಂತಲೂ ಯೆಹೂದ್ಯರಿಗೆ ಅದು ಪ್ರಮುಖವಾಗಿತ್ತು. [60]ಈ ಆಲೋಚನೆಯನ್ನು ಗ್ರೇಟ್‌ಬಿಟನ್‌ನಿಂದ ಪಡೆಯಲಾಗಿದೆ. ಇತ್ತಿಚಿನ ದಿವಸಗಳಲ್ಲಿ ಅಮೇರಿಕೆಯಲ್ಲಿ ಅಂಕಲ್ ಸ್ಯಾಮ್ ನ ಚಿತ್ರ ಪಟವು ಪುನರುತ್ಥಾನಗೊಂಡಿದೆ. ಯುದ್ಧ ಸನ್ನದ್ಧರಾಗುವದಕ್ಕೆ ಆರಿಸಲ್ಪಟ್ಟ ಸೈನಿಕರು.

[61]Herbert V. Prochnow, *The New Speaker's Treasury of and Wit and Wisdom* (New York: Harper and Brothers Publishers, 1958), 336. [62]Leonard Louis Levinson, *Webster's Unafraid Dictionary* (New York: Collier Books, 1967), 194.